ಸಂಪುಟ 01 | ಸಂಚಿಕೆ 95 | ಶುಕ್ರವಾರ 20 ಫೆಬ್ರವರಿ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

REGIONAL KANNADA DAILY MORNING

ಸಿಂಧನೂರು, ಮಸ್ಕಿ
ಮಾನ್ವಿ, ಅಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ವಿಶ್ವ ಸಾಮಾಜಿಕ ನ್ಯಾಯ ದಿನ**

ಪ್ರತಿ ವರ್ಷ ಫೆಬ್ರವರಿ 20 ರಂದು ವಿಶ್ವ ಸಾಮಾಜಿಕ ನ್ಯಾಯ ದಿನವನ್ನು ಆಚರಿಸಲಾಗುತ್ತದೆ, ಇದರಿಂದಾಗಿ ಜನರು ಸಾಮಾಜಿಕ ನ್ಯಾಯವು ಬಡತನ ನಿರ್ಮೂಲನೆಯ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬುದನ್ನು ನೋಡಲು ಪ್ರೋತ್ಸಾಹಿಸಲಾಗುತ್ತದೆ. ಈ ದಿನದ ಪ್ರಮುಖ ಉದ್ದೇಶವೆಂದರೆ ಪೂರ್ಣ ಉದ್ಯೋಗವನ್ನು ಸಾಧಿಸುವುದು ಮತ್ತು ಸಾಮಾಜಿಕ ಏಕೀಕರಣಕ್ಕೆ ಬೆಂಬಲ ನೀಡುವುದು. ಈ ದಿನವು ಬಡತನ, ಹೊರಗಿಡುವಿಕೆ ಮತ್ತು ನಿರುದ್ಯೋಗದಂತಹ ಸಮಸ್ಯೆಗಳನ್ನು ನಿಭಾಯಿಸುತ್ತದೆ.

**2) ಮಿಜೋರಾಂ ಸಂಸ್ಥಾಪನಾ ದಿನ**

ಪ್ರತಿ ವರ್ಷ ಫೆಬ್ರವರಿ 20 ರಂದು, ಈಶಾನ್ಯ ಭಾರತದ ರಾಜ್ಯಗಳಲ್ಲಿ ಒಂದಾದ ಮಿಜೋರಾಂ ತನ್ನ ಸಂಸ್ಥಾಪನಾ ದಿನವನ್ನು ಆಚರಿಸುತ್ತದೆ. ಇದು 1987 ರಲ್ಲಿ ರಾಜ್ಯವು ಭಾರತದ 23 ನೇ ರಾಜ್ಯವಾಗಿ ಅಧಿಕೃತವಾಗಿ ರೂಪುಗೊಂಡ ದಿನವನ್ನು ಸೂಚಿಸುತ್ತದೆ.

**3) ಅರುಣಾಚಲ ಪ್ರದೇಶ ಸಂಸ್ಥಾಪನಾ ದಿನ**

ಅರುಣಾಚಲ ಪ್ರದೇಶವು ಫೆಬ್ರವರಿ 20 ರಂದು ಕೇಂದ್ರಾಡಳಿತ ಪ್ರದೇಶದ ಸ್ಥಾನಮಾನವನ್ನು ಪಡೆದುಕೊಂಡಿತು ಮತ್ತು ಅರುಣಾಚಲ ಪ್ರದೇಶ ಎಂದು ಹೆಸರಿಸಲ್ಪಟ್ಟ ಕಾರಣ ಅರುಣಾಚಲ ಪ್ರದೇಶ ಸಂಸ್ಥಾಪನಾ ದಿನವನ್ನು ಆಚರಿಸಲಾಗುತ್ತದೆ.

## ಸುಭಾಷಿತ

ಮನಸ್ಸು ಶಾಂತಿಯಾದರೆ ಬದುಕು ಸುಲಭವಾಗುತ್ತದೆ.
ಕಷ್ಟಗಳು ಬರುವುದನ್ನು ನಿಲ್ಲಿಸಲಾಗದು, ಆದರೆ
ಧೈರ್ಯದಿಂದ ನಿಂತರೆ ಜಯ ಸಿಕ್ಕುತ್ತದೆ

ಶ್ರೀ ಸಿದ್ದೇಶ್ವರ ಸ್ವಾಮೀಜಿ

## ನಾವದಗಿ ಶ್ರೀಗಳಿಗೆ ಗೌರವ ಸಮರ್ಪಣೆ

ನೈಜ್ಯ ದೇಸೆ ನ್ಯೂಸ್

ತಾಳಿಕೋಟಿ: ತಾಲೂಕಿನ ಸುಕ್ಷೇತ್ರ ನಾವದಗಿ ಗ್ರಾಮ ಬ್ರಹನ್ಮಠದಲ್ಲಿ ಷ.ಬ್ರ. ಶ್ರೀ ರಾಜ ಗುರು ರಾಜೇಂದ್ರ ಒಡೆಯರ್ ಶಿವಾಚಾರ್ಯ ಮಹಾಸ್ವಾಮಿಗಳವರ ಗುರು ಪಟ್ಟಾಧಿಕಾರದ ದ್ವಿತೀಯ ವಾರ್ಷಿಕೋತ್ಸವದ ಪಯುಕ್ತ ನಡೆಯುತ್ತಿರುವ ಪುರಾಣ ಕಾರ್ಯಕ್ರಮದಲ್ಲಿ ಪೂಜ್ಯ ರಾಜಗುರು



ರಾಜೇಂದ್ರ ಒಡೆಯರ್ ಶಿವಾಚಾರ್ಯರನ್ನು ಬಸವನ ಬಾಗೇವಾಡಿಯ ಮ.ನಿ.ಪ್ರ.ಶ್ರೀ ಶಿವಪ್ರಕಾಶ ಮಹಾಸ್ವಾಮಿಗಳು ಸನ್ಮಾನಿಸಿ ಗೌರವ ಸಮರ್ಪಣೆ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಪುರಾಣಿಕ ರಾಚಯ್ಯ ಹಿರೇಮಠ ಹಾಗೂ ಭಕ್ತರು ಇದ್ದರು.

# ಮತದಾರರ ಪಟ್ಟಿಯ ದೋಷ ಸರಿಪಡಿಸುವಂತೆ ಚುನಾವಣಾ ಆಯೋಗಕ್ಕೆ ಡಿಸಿಎಂ ಪತ್ರ



ಬೆಂಗಳೂರು: ಗ್ರೇಟರ್ ಬೆಂಗಳೂರು ವ್ಯಾಪ್ತಿಯ ಪಾಲಿಕೆಗಳ ಚುನಾವಣೆ ಹಿನ್ನೆಲೆಯಲ್ಲಿ ಮತದಾರರ ಪಟ್ಟಿಯಲ್ಲಾಗಿರುವ ಗಂಭೀರ ಲೋಪಗಳನ್ನು ಸರಿಪಡಿಸುವಂತೆ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ರಾಜ್ಯ ಚುನಾವಣಾ ಆಯೋಗಕ್ಕೆ ಪತ್ರ ಮುಖೇನ ಆಗ್ರಹಿಸಿದ್ದಾರೆ.

ಎರಡು ದಿನಗಳ ಹಿಂದೆ ಡಿ.ಕೆ.ಶಿವಕುಮಾರ್ ಅವರು ಖುದ್ದಾಗಿ ರಾಜ್ಯ ಚುನಾವಣಾ ಆಯೋಗದ ಕಚೇರಿಗೆ ಭೇಟಿ ನೀಡಿ ಚರ್ಚೆ ನಡೆಸಿದ್ದರು. ಮುಂದುವರೆದ ಭಾಗವಾಗಿ ಪತ್ರ ಬರೆದಿರುವ ಅವರು ಮತದಾರರ ಪಟ್ಟಿಯನ್ನು ಕ್ರಮಬದ್ಧವಾಗಿ ಬೀದಿ, ಮನೆ ಮತ್ತು ಮತದಾರರವಾರು ನಕ್ಷೀಕರಣ (ಮ್ಯಾಪಿಂಗ್) ಮಾಡುವಂತೆ ಒತ್ತಾಯಿಸಿದ್ದಾರೆ. ಜೊತೆಯಲ್ಲಿ ಈ ಮೊದಲು ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿನ ಲೋಪಗಳಿಗೆ ಸಂಬಂಧಪಟ್ಟವರನ್ನು ಹೊಣೆ ಮಾಡುವಂತೆಯೂ ಆಗ್ರಹಿಸಿದ್ದಾರೆ. ಮತದಾರರ ಪಟ್ಟಿಯಲ್ಲಿ ಗಂಭೀರವಾದ ಹಾಗೂ ವ್ಯಾಪಕವಾದ ಲೋಪಗಳು ನಡೆದಿರುವುದು ತಮ ಗಮನಕ್ಕೆ ಬಂದಿದೆ. ಒಂದೇ ಕುಟುಂಬದ ಮತದಾರರನ್ನು ಬೇರೆ ಬೇರೆ ಮತಗಟ್ಟೆಗಳಿಗೆ ಮತ್ತು ವಾರ್ಡ್‌ಗಳಿಗೆ ಸೇರಿಸಲಾಗಿದೆ.

ಮನೆಗಳ ಸಂಖ್ಯೆಯಲ್ಲಿ ಹಾಗೂ ಬೀದಿಗಳ ಹೆಸರುಗಳನ್ನು ತಪ್ಪಾಗಿ ನಮೂದಿಸಲಾಗಿದೆ. ಕೆಲವು ಕಡೆ ನಕಲಿ ಹೆಸರುಗಳನ್ನು ಸೇರಿಸಲಾಗಿದೆ. ಇನ್ನೂ ಕೆಲವು ಕಡೆ ಮತದಾರರ ಹೆಸರುಗಳೇ ನಾಪತ್ತೆಯಾಗಿವೆ. ದೀರ್ಘಕಾಲದಿಂದಲೂ ಒಂದೇ ಕಡೆ ನೆಲೆಸಿರುವವರ ಹೆಸರುಗಳು ಮತದಾರರ ಪಟ್ಟಿಯಿಂದ ತಪ್ಪಿ ಹೋಗಿವೆ. ಇನ್ನು ಕೆಲವು ಕಡೆ ಬೇರೆ ವಾರ್ಡ್‌ಗಳಿಗೆ ತಪ್ಪಾಗಿ ಮತದಾರರ ಹೆಸರನ್ನು ಸ್ಥಳಾಂತರಿಸಲಾಗಿದೆ ಎಂದು ದೂರಿದ್ದಾರೆ. ಕೆಲವು ಮತದಾರರು ಬೇರೆ ಕಡೆ ಸ್ಥಳಾಂತರಗೊಂಡಿದ್ದರೂ ಹಿಂದೆ ಅವರು ವಾಸಿಸುತ್ತಿದ್ದ ಸ್ಥಳದಲ್ಲಿಯೇ ಮುಂದುವರೆಸಲಾಗುತ್ತಿದೆ ಎಂದು ವಿವರಿಸಿದ್ದಾರೆ. ಇದು ಚುನಾವಣೆಯ ಮೇಲೆ ಗಂಭೀರ ಪರಿಣಾಮ ಉಂಟುಮಾಡಲಿದೆ. ಪಾರದರ್ಶಕ ಹಾಗೂ ಖಾಯಂ ಕ್ರಮಗಳನ್ನು ತೆಗೆದುಕೊಂಡು ಮತದಾರರ ಪಟ್ಟಿಯನ್ನು ಸರಿಪಡಿಸಬೇಕು ಎಂದು ಸಲಹೆ ನೀಡಿದ್ದಾರೆ.

ಮತಗಟ್ಟೆವಾರು ಬೀದಿಯನ್ನು ನಿರ್ದಿಷ್ಟವಾಗಿ ಗುರುತಿಸಬೇಕು. ಪ್ರತಿಯೊಂದು ಬೀದಿಗೂ ಸೀಮಿತ ಚೌಕಟ್ಟಿನಲ್ಲಿ ಮನೆಗಳನ್ನು ಸೇರಿಸಬೇಕು. ಪ್ರತಿ ಒಂದು ಮನೆಗೂ ಮತದಾರರನ್ನು ಸ್ಪಷ್ಟವಾಗಿ ಸೇರಿಸಬೇಕು. ಮತದಾರರ ಪಟ್ಟಿಯನ್ನು ನಿರ್ದಿಷ್ಟವಾಗಿ ಗುರುತಿಸಿ ನಕ್ಷೀಕರಣ ಮಾಡಬೇಕು. ನಕಲುಗಳನ್ನು ತಡೆಯಬೇಕು. ಹಾಗೆಯೇ ಏಕ ಪಕ್ಷೀಯವಾಗಿ ಮತದಾರರ ಹೆಸರುಗಳನ್ನು ಸ್ಥಳಾಂತರಿಸುವುದನ್ನು ತಡೆಯಬೇಕು ಎಂದು ಎಚ್ಚರಿಕೆ ನೀಡಿದ್ದಾರೆ. ಆಯೋಗ ವಿಶೇಷ ಮತದಾರರ ಪರಿಷ್ಕರಣೆ ಆಂದೋಲನವನ್ನು ಕೈಗೆತ್ತಿಕೊಂಡು ಮತದಾರರಿಗೆ ಸಾಂವಿಧಾನಿಕ ಹಕ್ಕು ವಂಚನೆ ಯಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು ಎಂದು ವಿವರಿಸಿದ್ದಾರೆ.

ಬಿಬಿಎಂಪಿ ಬದಲಾವಣೆಯಾಗಿ ಗ್ರೇಟರ್ ಬೆಂಗಳೂರು ಅಸ್ತಿತ್ವಕ್ಕೆ ಬಂದಿದೆ. ಬೆಂಗಳೂರಿನಲ್ಲಿ ಹೊಸದಾಗಿ 5 ಪಾಲಿಕೆಗಳು ರಚನೆಯಾಗಿವೆ. ಅವುಗಳಲ್ಲಿ ವಾರ್ಡ್‌ಗಳ ವಿಂಗಡಣೆ ಹೊಸದಾಗಿ ನಡೆದಿದೆ ಎಂದು ತಿಳಿಸಿದ್ದಾರೆ. ಕೆಲವು ಕಡೆ ಮತದಾರರ ಪಟ್ಟಿಯಲ್ಲಿ ಒಟ್ಟಾರೆ ಬೀದಿ ಹಾಗೂ ಒಟ್ಟು ರಸ್ತೆಯ ನಿವಾಸಿಗಳ ಹೆಸರುಗಳನ್ನೇ ಕೈ ಬಿಡಲಾಗಿದೆ. ಆಧಾರ್ ಕಾರ್ಡ್ ನಲ್ಲಿರುವ ಫೋಟೋಗಳನ್ನೇ ಮತದಾರರ ಪಟ್ಟಿಗೂ ಎರವಲು ಪಡೆದಿರುವುದು ನಿಯಮ ಉಲ್ಲಂಘನೆಯಾಗಿದೆ. ಇನ್ನೂ ಕೆಲವು ಕಡೆ ಪ್ರಮುಖವಾಗಿ ಮತದಾರರ ಹೆಸರನ್ನು ಬೇರೆ ವಾರ್ಡಿಗೆ ಸ್ಥಳಾಂತರಿಸಲಾಗಿದೆ. ಒಬ್ಬ ಭಿನ್ನ ಲಿಂಗ ನಮೂದಿಸಿ ಒಬ್ಬ ವ್ಯಕ್ತಿಯ ಹೆಸರನ್ನು ಪಟ್ಟಿಯಲ್ಲಿ ಸೇರಿಸಲಾಗಿದೆ. ಹೆಸರು ಮತ್ತು ವಾರ್ಡ್ ನಂಬರ್ ಗಳನ್ನು ತಪ್ಪಾಗಿ ನಮೂದಿಸಿರುವ ಹಲವು ಉದಾರಣೆಗಳಿವೆ ಎಂದು ಪತ್ರದಲ್ಲಿ ವಿವರಿಸಿದ್ದಾರೆ.

## ರಂಜಾನ್ ಹಬ್ಬದ ಪ್ರಯುಕ್ತ ಅಭಿನಂದನ್ ಸ್ಫೂರ್ತಿ ಧಾಮದ ಮಕ್ಕಳಿಗೆ ಸಹೋದರಿ ಯಾಸ್ಮಿನ್ ಅವರ ಮಾನವೀಯ ಸೇವೆ




ನೈಜ್ಯ ದೇಸೆ ನ್ಯೂಸ್

ಮಸ್ಕಿ: ಪವಿತ್ರ ರಂಜಾನ್ ಹಬ್ಬದ ಪ್ರಯುಕ್ತ ಇಂದು ಅಭಿನಂದನ್ ಸ್ಫೂರ್ತಿ ಧಾಮದಲ್ಲಿ ಮಾನವೀಯತೆಗೆ ಮಾದರಿಯಾದ ಸೇವೆ ನಡೆಯಿತು. ರಂಜಾನ್ ತಿಂಗಳು ಮುಸ್ಲಿಮರಿಗೆ ದಾನ, ಧರ್ಮ, ಸಹಾಯ ಹಾಗೂ ಮಾನವೀಯತೆಯ ಸಂದೇಶ ನೀಡುವ ಪವಿತ್ರ ಕಾಲವಾಗಿದ್ದು, ಈ ಸಂದರ್ಭದಲ್ಲಿ ಅಗತ್ಯವಿರುವವರಿಗೆ ನೆರವಾಗುವುದು ಧಾರ್ಮಿಕ ಕರ್ತವ್ಯವೆಂದು ಪರಿಗಣಿಸಲಾಗುತ್ತದೆ.

ಈ ಪವಿತ್ರ ತಿಂಗಳ ಆತ್ಮಸ್ಫೂರ್ತಿಯಿಂದ ಪ್ರೇರಿತರಾಗಿ ಸಹೋದರಿ ಯಾಸ್ಮಿನ್ ಅವರು ಒಂದು ಹೋಟೆಲ್‌ನಲ್ಲಿ ದುಡಿದು ಪಡೆದ 15 ದಿನಗಳ ಸಂಬಳವನ್ನು ಸಂಪೂರ್ಣವಾಗಿ ಮಕ್ಕಳ ಕಲ್ಯಾಣಕ್ಕಾಗಿ ಮೀಸಲಿಟ್ಟು, ಅಭಿನಂದನ್ ಸ್ಫೂರ್ತಿ ಧಾಮದ ಮಕ್ಕಳಿಗೆ ಅಗತ್ಯ ವಸ್ತುಗಳು ಹಾಗೂ ಸಿಹಿ ತಿನಿಸುಗಳನ್ನು ವಿತರಿಸಿದರು. ಸ್ವಂತ ಶ್ರಮದ ಆದಾಯವನ್ನು ಸಮಾಜದ ಹಿತಕ್ಕಾಗಿ ಅರ್ಪಿಸುವ ಮೂಲಕ ಸಹೋದರಿ ಯಾಸ್ಮಿನ್ ಅವರು ರಂಜಾನ್‌ನ ನಿಜವಾದ ಅರ್ಥವಾದ ದಾನ ಮತ್ತು ಸಹಭಾವನೆಯನ್ನು ಸಮಾಜಕ್ಕೆ ಸಾರಿದರು.

ಅವರ ಈ ಸೇವಾಭಾವನೆ ಎಲ್ಲರ ಮನಸ್ಸುಗಳನ್ನು ಸ್ಪರ್ಶಿಸಿ, ಹಬ್ಬದ ಸಂತಸಕ್ಕೆ ಇನ್ನಷ್ಟು ಅರ್ಥವನ್ನು ನೀಡಿತು. ಸಹೋದರಿ ಯಾಸ್ಮಿನ್ ಅವರ ಈ ಶ್ರೇಷ್ಠ ವ್ಯಕ್ತಿತ್ವ ಹಾಗೂ ನಿಸ್ವಾರ್ಥ ಸೇವೆಗೆ ಅನಂತ ಕೋಟಿ ನಮನಗಳು. ಇಂತಹ ಸೇವಾಕಾರ್ಯಗಳು ಸಮಾಜದಲ್ಲಿ ಶಾಂತಿ, ಸಹಬಾಳ್ವೆ ಮತ್ತು ಮಾನವೀಯ ಮೌಲ್ಯಗಳನ್ನು ಮತ್ತಷ್ಟು ಬಲಪಡಿಸುತ್ತವೆ ಎಂದು ಉಪಸ್ಥಿತರಿದ್ದವರು ಅಭಿಪ್ರಾಯ ವ್ಯಕ್ತಪಡಿಸಿದರು.

## ಹಾಲಾಪೂರ: ಹಿಂದೂ ಹೃದಯ ಸಾಮ್ರಾಟ ಛತ್ರಪತಿ ಶಿವಾಜಿ ಜಯಂತಿ

ನೈಜ್ಯ ದೇಸೆ ನ್ಯೂಸ್



ಹಾಲಾಪೂರ: ಗ್ರಾಮದಲ್ಲಿರುವ ಹಿಂದೂ ಹೃದಯ ಸಾಮ್ರಾಟ ಛತ್ರಪತಿ ಶಿವಾಜಿ ಮಹಾರಾಜ್ ಜಯಂತಿಯ ಅಂಗವಾಗಿ ಪೂಜಾ ಕಾರ್ಯಕ್ರಮವನ್ನು ಬಸವಲಿಂಗಸ್ವಾಮಿ ನಂದಿಹಾಳ ನೆರವೇರಿಸಿದರು.

ನಂತರ ಉಪನ್ಯಾಸಕ ಸಿದ್ದಾರ್ಥ ಪೊ. ಪಾ ಮಾತನಾಡಿ ಹಿಂದುಸ್ತಾನವನ್ನು ಒಗ್ಗೂಡಿಸಲು ಬಹಳಷ್ಟು ಶ್ರಮವಹಿಸಿದವರು ಛತ್ರಪತಿ ಶಿವಾಜಿಯವರು, ಅನೇಕ ಕೋಟೆಗಳನ್ನು ಗೆದ್ದು ಇಡೀ ಭಾರತವನ್ನು ತಮ್ಮ ಆಳ್ವಿಕೆಗೆ ತಂದರು, ಅವರ ಶೌರ್ಯ ಸಾಹಸ ರಾಷ್ಟ್ರಭಕ್ತಿ ಆಡಳಿತಗಾರರಾಗಿ ಭಾರತ ಚರಿತ್ರೆಯಲ್ಲಿ ಅಗ್ರಪಂಕ್ತಿ ನಾಯಕರಾಗಿ ಇಂದಿಗೂ ಜನಮನದಲ್ಲಿ ಹಚ್ಚಹಸಿರಾಗಿ ಉಳಿದಿರುವ ಮಹಾನ್ ಪ್ರಸಿದ್ಧ ಪುರುಷರು, ಮೂಲ ಅವರಿಗೆ ಪ್ರೇರಣೆ ಎಂದರೆ ತಂದೆ ತಾಯಿ ಹಾಗೂ ಸಮರ್ಥ ಗುರುಗಳ ಆಶೀರ್ವಾದ, ಅತ್ಯುತ್ತಮ ಆದರ್ಶ ಕಥೆಗಳು, ಅವರಿಗೆ ಭವಿಷ್ಯದಲ್ಲಿ ಬದಲಾವಣೆಗೆ ಪೂರಕ ಶಕ್ತಿಯಾಗಿ ಬೆಳೆದರೂ ಎಂದು ಹೇಳಿದರು.

ಈ ವೇಳೆಯಲ್ಲಿ ಮೌನೇಶ ಮರಾಠ, ಬಸವರಾಜ ಗಜೇಂದ್ರಗಡ, ಚನ್ನಬಸವ ಮಾ.ಪಾ, ತೇನ್ ಸಿಂಗ ಮರಾಠ, ಅಮರೇಶ ಸೂಸೈಟಿ,ಶಾ0ತಪ, ನಾಗರಾಜ ತುಂಟಾಪುರ, ಗ0ಗಾಧರ ಮಡಿವಾಳ, ಅಮರೇಶ ಏಳುಕುರಿ, ಮೌಲಸಾಬ, ಬಸವರಾಜ ಮರಾಠ, ಫಯಾಜ, ದುರಗೇಶ, ಬಸವರಾಜ ಇನ್ನಿತರರು ಇದ್ದರು.

## ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಆಚರಣೆ

ನೈಜ್ಯ ದೇಸೆ ನ್ಯೂಸ್




ತಾಳಿಕೋಟಿ: ಪಟ್ಟಣದ ಸರ್ವಜ್ಞ ವಿದ್ಯಾಪೀಠ ಕನ್ನಡ ಮತ್ತು ಆಂಗ್ಲ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢಶಾಲೆ ತಾಳಿಕೋಟೆಯಲ್ಲಿ ಗುರುವಾರ ಹಿಂದೂ ಸಾಮ್ರಾಟ ಛತ್ರಪತಿ ಶಿವಾಜಿ ಮಹಾರಾಜರ 396 ನೇ ಜಯಂತೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಸಂಸ್ಥಾಪಕ ಅಧ್ಯಕ್ಷರಾದ ಸಿದ್ದನಗೌಡ ಮಂಗಳೂರ,ಮುಖ್ಯಗುರುಗಳಾದ ಸಂತೋಷ ಪವಾರ ಜವಳಗೇರಿ,ದೈಹಿಕ ಶಿಕ್ಷಕರಾದ ಬಸವರಾಜ ಚಳಗಿ,ಶಾಂತಗೌಡ ಬಿರಾದಾರ, ಸಂಜು ಕುಮಾರ ರಾಠೋಡ, ಬಸವರಾಜ ಸವದತ್ತಿ, ರವಿಕುಮಾರ , ರವಿಕುಮಾರ ಮಲಾಬಾದಿ, ರಸೂಲಸಾ ತುರ್ಕಣಗೇರಿ, ಸಿದ್ದನಗೌಡ ಮುದ್ನೂರ, ಭೀಮನಗೌಡ ಸಾಸನೂರ, ಚೇತನ ನಾವದಗಿ, ಸವಿತಾ ಅಸ್ಕಿ,ಶಿವಲೀಲಾ ಚುಂಚೂರು, ರೂಪ ಪಾಟೀಲ, ಸಂಗಮೇಶ ಬಿರಾದಾರ, ಸಂಗೀತ ಬಿರಾದಾರ, ಮೇಘಾ ಪಾಟೀಲ, ಬೋರಮ್ಮ ಉಕ್ಕಲಿ, ಅನಿತಾ ಚೌದ್ರಿ, ಜ್ಯೋತಿ ಪೋಲಿಸ್ ಪಾಟೀಲ, ಶೃತಿ ಚೌದ್ರಿ,ರಾಜಬಿ ಬಿದರಿ, ನಾಗರತ್ನ ಮೈಲೇಶ್ವರ,ಶಿವಕುಮಾರ ಕುಂಬಾರ, ಹೀನಾ ಸನದಿ, ದೇವೇಂದ್ರ ಗುಳೆದ, ಮುಬಾರಕ ಬನ್ನಟ್ಟಿ,ದೇವರಾಜ ದೇಸಾಯಿ, ಸುಮಾ ಹಿರೇಮಠ, ಪ್ರತಿಭಾ ಗುಬ್ಬೇವಾಡ, ಗುರುದೇವಿ ಮಡಿವಾಳರ, ಜೈಯಶ್ರೀ ಹದಿಮೂರ, ಜೈರಾಬಿ ಮುಲ್ಲಾ ಸರ್ವ ಸಿಬ್ಬಂದಿ ವರ್ಗದವರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಪೌರಕಾರ್ಮಿಕರೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಆಯೋಗದ ಅಧ್ಯಕ್ಷ ಪಿ.ರಘು ಸಲಹೆ ಮಕ್ಕಳಿಗೆ ಶಿಕ್ಷಣ ಕೊಡಿಸಲು ಪೌರ ಕಾರ್ಮಿಕರಿಗೆ ಸಲಹೆ

ನೈಜ್ಯ ದೇಸೆ ನ್ಯೂಸ್




ರಾಯಚೂರು: ಸಫಾಯಿ ಕರ್ಮಚಾರಿಗಳ ಹಾಗೂ ಪೌರ ಕಾರ್ಮಿಕರ ಸಮಸ್ಯೆಗಳು ಮತ್ತು ಅವರ ಕುಂದು ಕೊರತೆಗಳನ್ನು ಸರ್ಕಾರಕ್ಕೆ ಮುಟ್ಟಿಸುವ ಮತ್ತು ಪರಿಹರಿಸುವ ಉದ್ದೇಶವನ್ನು ಸಫಾಯಿ ಕರ್ಮಚಾರಿಗಳ ಆಯೋಗವು ಹೊಂದಿದೆ. ಪೌರಕಾರ್ಮಿಕರು ತಾವು ಸಮಾಜದಲ್ಲಿ ಎಲ್ಲರಂತೆ ಇರಬೇಕು ಎಂಬ ಭಾವನೆಯನ್ನು ಇಟ್ಟುಕೊಂಡು ಮಕ್ಕಳನ್ನೂ ಶಿಕ್ಷಣವಂತರನ್ನಾಗಿ ಮಾಡಲು ಶ್ರಮಿಸಬೇಕೆಂದು ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಪಿ.ರಘು ಅವರು ಹೇಳಿದರು.

ನಗರದ ಜಿಲ್ಲಾಡಳಿತ ಭವನದಲ್ಲಿ ಫೆ.19ರಂದು ಹಮ್ಮಿಕೊಂಡಿದ್ದ ಪೌರಕಾರ್ಮಿಕರೊಂದಿಗೆ ಸಂವಾದ ಕಾರ್ಯಕ್ರಮ ಹಾಗೂ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಪೌರಕಾಮಿಕರು ತಾವು ಸಮಾಜದಿಂದ ದೂರು ಇದ್ದೇವೆ ಎಂಬ ಭಾವನೆಯನ್ನು ಬಿಡಬೇಕು. ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕ. ಸರಿಯಾಗಿ ನೋಡಿಕೊಳ್ಳಲು ಮುಂದಾಗಬೇಕು ಎಂದರು. ಇದೇ ವೇಳೆ ಪೌರಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷ ಎಸ್.ಮಾರೆಪ್ಪ ಮಾತನಾಡಿ, ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ನೇರ ಪಾವತಿಯಡಿ ಕಾರ್ಯನಿರ್ವಹಿಸುತ್ತಿದ್ದ, ಮೃತ ಹೊಂದಿದ ಪೌರಕಾರ್ಮಿಕರ ಮಾಹಿತಿಯನ್ನು ತಪ್ಪಾಗಿ ದಾಖಲಿಸಲಾಗಿದ್ದು, ಇದನ್ನು ಮರುಪರಿಶೀಲಿಸಬೇಕು.

ಮತ್ತು ಮೃತ ಪೌರಕಾರ್ಮಿಕರ ಕುಟುಂಬಕ್ಕೆ ಪರಿಹಾರ ಮತ್ತು ಸೌಲಭ್ಯಗಳನ್ನು ಒದಗಿಸಬೇಕೆಂದು ತಿಳಿಸಿದರು. ದಲಿತ ಸಮರ ಸೇನೆಯ ರಾಜ್ಯ ವಿಭಾಗೀಯ ಸಂಚಾಲಕ ನೀಲಕಂಠ(ಅನಿಲ್) ಮಾತನಾಡಿ, ಸಫಾಯಿ ಕರ್ಮಚಾರಿಗಳಿಗೆ ಮೂಲಭೂತ ಸೌಲಭ್ಯಗಳು ಮತ್ತು ಕಡ್ಡಾಯವಾಗಿ ಆಯಾ ಸ್ಥಳೀಯ ಸಂಸ್ಥೆಗಳಿಂದ ಗುರುತಿನ ಚೀಟಿಯನ್ನು ಒದಗಿಸಬೇಕು. ಇದರಿಂದ ಸರ್ಕಾರದ ಸೌಲಭ್ಯಗಳನ್ನು ಪಡೆಯಲು ಅನುಕೂಲವಾಗುತ್ತದೆ ಎಂದು ಸಲಹೆ ಮಾಡಿದರು. ಇತರೆ ಪೌರಕಾರ್ಮಿಕರು ಮಾತನಾಡಿ, ವಾರಕ್ಕೊಂದು ದಿನ ಸಂಪೂರ್ಣ ರಜೆಯನ್ನು ನೀಡಬೇಕು.

ರಾಯಚೂರು ನಗರದಿಂದ ಬೇರೆ ತಾಲೂಕುಗಳ ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸ ಮಾಡುವ ಪೌರಕಾರ್ಮಿಕರು ವಾರಕ್ಕೊಂದು ದಿನ ರಜೆ ಸಿಕ್ಕರೆ ಮನೆಗೆ ಹೋಗಿ ಬರಲು ಅನುಕೂಲವಾಗುತ್ತದೆ ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಆಯೋಗದ ಕಾರ್ಯದರ್ಶಿ ಮಾದುಸ್ವಾಮಿ, ಮಹಾನಗರ ಪಾಲಿಕೆ ಆಯುಕ್ತ ಜುಬಿನ್ ಮೊಹಪಾತ್ರ, ನಗರಸಭೆ ಪರಾಯುಕ್ತ ಈರಣ್ಣ ಬಿರಾದಾರ, ಪಾಲಿಕೆ ಉಪ ಆಯುಕ್ತರಾದ ಸಂತೋಷಿರಾಣಿ, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಹಾಲಸಿದ್ದಪ್ಪ ಪೂಜಾರಿ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕಿ ಸಿಂಧೂ, ಪಾಲಿಕೆಯ ಅಧಿಕಾರಿ ಕೃಷ್ಣ ಶಾವಂತಗೇರಾ ಸೇರಿದಂತೆ ಅನೇಕರಿದ್ದರು.

## ಸಾಹಿತ್ಯ ಸಿಂಚನ

ಸಂಜೆಯ ರಂಗು

ಹೊಂಬಣ್ಣದ ಸಂಜೆಯ ರಂಗು
ಕಾಣಲು ಮನ ಮುಗುಳ್ನಗೆ ಬೀರಿ
ನೋವುಗಳು ಮರೆಯಾಗಿ
ನಲಿಯುತ್ತಿದೆ ಹೃದಯ ಹಗುರಾಗಿ.!!

ನೇಸರನು ಭೂವಿಗೆ ವಿದಾಯ
ಹೇಳಿ ಮುತ್ತಿಟ್ಟು ಹೊರಟಂತೆ
ಗಿಡ ಮರ ನೋಡಿ ನಕ್ಕಂತೆ
ಕಂಡ ಮನದಲಿ ಬಣ್ಣದ ಚಿತ್ತಾರ.!!

**ಕವಿತಾ ಹಿರೇಮಠ**

# ಕೆಲಸ ಕಳೆದುಕೊಂಡ ಸಫಾಯಿ ಕರ್ಮಚಾರಿಗಳ ಮರುನೇಮಕಕ್ಕೆ ಆದೇಶ ರಿಮ್ಸ್‌ಗೆ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಪಿ. ರಘು ಭೇಟಿ; ಪರಿಶೀಲನೆ

ನೈಜ್ಯ ದೆಸೆ ನ್ಯೂಸ್

**ರಾಯಚೂರು:** ರಾಯಚೂರು ಪ್ರವಾಸದಲ್ಲಿದ್ದ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷರಾದ ಪಿ. ರಘು ಅವರು ಫೆಬ್ರವರಿ 19ರಂದು ನಗರದ ರಿಮ್ಸ್ ಆಸ್ಪತ್ರೆಗೆ ಭೇಟಿ ನೀಡಿದರು.

ಭೇಟಿ ವೇಳೆ ಅಧ್ಯಕ್ಷರು, ಅಲ್ಲಿನ ಸ್ವಚ್ಛತಾ ಕಾರ್ಯ ಹಾಗೂ ಕರ್ಮಚಾರಿಗಳ ಕೆಲಸದ ಪರಿಸ್ಥಿತಿಯ ಬಗ್ಗೆ ಪರಿಶೀಲಿಸಿದರು. ರಿಮ್ಸ್ ಅಧಿಕಾರಿಗಳೊಂದಿಗೆ ಸಭೆ: ಭೇಟಿ ಸಂದರ್ಭದಲ್ಲಿ ಅಧ್ಯಕ್ಷರು, ರಿಮ್ಸ್ ಅಧಿಕಾರಿಗಳೊಂದಿಗೆ ಸಭೆ ನಡೆಸಿ ನಾನಾ ವಿಷಯಗಳ ಬಗ್ಗೆ ಚರ್ಚಿಸಿದರು. ಸ್ವಚ್ಛತಾ ಸಿಬ್ಬಂದಿಯೊಂದಿಗೆ ಮಲ ಎತ್ತಿಸುವುದು ಅಮಾನವೀಯ ಕಾರ್ಯವಾಗುತ್ತದೆ. ಈ ಅನಿಷ್ಠ ಪದ್ದತಿ ತೊಲಗಬೇಕು. ಈ ಕಾರ್ಯಕ್ಕೆ ಹಲವು ಯಂತ್ರೋಪಕರಣಗಳಿವೆ. ಅದನ್ನು ಬಿಟ್ಟು ಸಿಬ್ಬಂದಿಯಿಂದ ಮಲ ಎತ್ತಿಸುವ ಕೆಲಸ ಮಾಡಿಸುವುದು ಸರಿಯಲ್ಲ. ಇತ್ತೀಚೆಗೆ ರಿಮ್ಸನಲ್ಲಿ ಸ್ವಚ್ಛತೆ ಕೆಲಸ ಮಾಡುವ ಸಿಬ್ಬಂದಿಯಿಂದ ಮಲ ಎತ್ತಿಸಿದ ಕುರಿತು ದಾಖಲೆ ಸಮೇತ ದೂರು ಬಂದಿದ್ದು, ಈ ಕೆಲಸ ಮಾಡಿಸಿದ ಸಂಬಂಧಪಟ್ಟ ಸೂಪರ್‌ವೈಸರಗಳಿಗೆ ಕೂಡಲೇ ನೊಟೀಸ್ ಜಾರಿ ಮಾಡಿ ಶಿಸ್ತುಕ್ರಮ ಜರುಗಿಸಿ ಎಂದು ರಿಮ್ಸ್ ನಿರ್ದೇಶಕರಿಗೆ ನಿರ್ದೇಶನ ನೀಡಿದರು.



ಇಲ್ಲವಾದರೆ ರಿಮ್ಸ್ ನಿರ್ದೇಶಕರು ಸೇರಿ ಎಲ್ಲರ ವಿರುದ್ಧ ಶಿಸ್ತಿನ ಕ್ರಮ ಜರುಗಿಸಲಾಗುತ್ತದೆ ಎಂದು ಅವರು ಎಚ್ಚರಿಕೆ ನೀಡಿದರು. ಈ ಘಟನೆಗೆ ಸಂಬಂಧಿಸಿದಂತೆ ಪ್ರಶ್ನಿಸಲು ಹೋದ 7 ಜನ ಸ್ವಚ್ಛತಾ ಸಿಬ್ಬಂದಿಯನ್ನು ಕೆಲಸದಿಂದ ತೆಗೆದು ಹಾಕಿದ ಕುರಿತು ಮಾಹಿತಿ ಬಂದಿದೆ. ಯಾವುದೇ ಕಾರಣಕ್ಕೂ ಕರ್ಮಚಾರಿಗಳ ಹೊಟ್ಟೆ ಮೇಲೆ ಹೊಡೆಯಬಾರದು. ಅಮಾನತುಗೊಳಿಸಿದ ಅಥವಾ ವರ್ಗಾವಣೆ ಮಾಡಿದ ಎಲ್ಲ ಸಫಾಯಿ ಕರ್ಮಚಾರಿಗಳನ್ನು ತಕ್ಷಣವೇ ಮರುನೇಮಕ ಮಾಡಿಕೊಳ್ಳಬೇಕು ಎಂದು ಆಸ್ಪತ್ರೆಯ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು. ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಂಡ ಸ್ವಚ್ಛತಾ ಸಿಬ್ಬಂದಿಗೆ ಪ್ರತಿ ವರ್ಷ ನವೀಕರಣ ಮಾಡಿಕೊಳ್ಳಲು ರಿಮ್ಸನ ಕೆಲ ಅಧಿಕಾರಿಗಳು ಲಂಚದ ಬೇಡಿಕೆ ಇಟ್ಟಿರುವ ಬಗ್ಗೆ ದೂರುಗಳಿವೆ.

ಇದು ಮುಂದುವರೆಯಬಾರದು ಎಂದು ಎಚ್ಚರಿಕೆ ನೀಡಿದರು. ಮತ್ತು ಈ ಬಗ್ಗೆ ತನಿಖೆ ಕೈಗೊಂಡು ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಬೇಕಾಗುತ್ತದೆ ಎಂದು ಅವರು ಎಚ್ಚರಿಸಿದರು. ಅಹವಾಲು ಆಲಿಕೆ: ಅಧ್ಯಕ್ಷರು, ಇದೆ ವೇಳೆ ಕಾರ್ಮಿಕರ ಅಹವಾಲು ಆಲಿಸಿದರು. ಸಫಾಯಿ ಕರ್ಮಚಾರಿಗಳ ಹಕ್ಕುಗಳನ್ನು ರಕ್ಷಿಸುವುದು ಆಯೋಗದ ಮೊದಲ ಆದ್ಯತೆಯಾಗಿದೆ. ಅರ್ಹ ಕಾರ್ಮಿಕರಿಗೆ ನ್ಯಾಯ ಸಿಗುವವರೆಗೆ ನಾವು ವಿಶ್ರಮಿಸುವುದಿಲ್ಲ. ಸಫಾಯಿ ಕರ್ಮಚಾರಿಗಳ ಹಿತರಕ್ಷಣೆಗೆ ಸರ್ಕಾರ ಬದ್ಧವಾಗಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಆಯೋಗದ ಕಾರ್ಯದರ್ಶಿ ಮಾಧುಸ್ವಾಮಿ, ರಿಮ್ಸ್ ನಿರ್ದೇಶಕ ಡಾ.ರಮೇಶ, ಡಾ.ಎಂ.ಬಸವರಾಜ, ಪ್ರಮುಖರಾದ ಕಡಗೋಲ ಚೇತನ, ಪ್ರಸಾದ ಭಂಡಾರಿ, ಸೇರಿದಂತೆ ಅನೇಕರಿದ್ದರು.

## ವೈದ್ಯರು, ಸಿಬ್ಬಂದಿಗಳ ಕರ್ತವ್ಯಕ್ಕೆ ಅಡ್ಡಿ ಮಾನಸಿಕ ಕಿರುಕುಳ ಕ್ರಮಕ್ಕೆ ಆಗ್ರಹ

ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರ: ತಾಲೂಕು ಸಾರ್ವಜನಿಕ ಆಸ್ಪತ್ರೆ ಲಿಂಗಸಗೂರಿನಲ್ಲಿ ಎಲ್ಲಾ ಪಾಳೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿಗಳ ಮೇಲೆ ಕೆಲವು ವ್ಯಕ್ತಿಗಳು ಆಸ್ಪತ್ರೆಗೆ ನುಗ್ಗಿ, ಅತಿಕ್ರಮ ಪ್ರವೇಶ ಮಾಡಿ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿಗಳ ಮೇಲೆ ಅವಾಚ್ಯ ಶಬ್ದಗಳಿಂದ ನಿಂಧಿಸುವುದು.**



ಮಾನಸಿಕವಾಗಿ ಕಿರುಕುಳ ನೀಡುತ್ತಿ ರುವುದು ಕರ್ತವ್ಯಕ್ಕೆ ಅಡ್ಡಿಪಡಿಸು ತ್ತಿರುವುದು ಹಾಗೂ ವಿಡಿಯೋ ರೆಕಾರ್ಡಿಂಗ್ ಮಾಡಿ ಮಾನಸಿಕ ಕಿರುಕುಳ ನೀಡುತ್ತಿರುತ್ತಾರೆ. ಇದರಿಂದ ವೈದ್ಯರು ಹಾಗೂ ಸಿಬ್ಬಂದಿಗಳು ಸುಗಮವಾಗಿ ಕಾರ್ಯ ನಿರ್ವಹಿಸಲು ತುಂಬಾ ತೊಂದರೆಯಾ ಗುತ್ತಿದ್ದು ಕೂಡಲೇ ಅಂಥವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ತಾಲೂಕ ಸಾರ್ವಜನಿಕ ಆಸ್ಪತ್ರೆಯ ಸಿಬ್ಬಂದಿಗಳು ಸಹಾಯಕ ಆಯುಕ್ತರಿಗೆ ಮನವಿ ಸಲ್ಲಿಸಿ ಒತ್ತಾಯಿಸಿದರು. ಪ್ರತಿ ದಿನ ಆಸ್ಪತ್ರೆಯಲ್ಲಿ ವೈದ್ಯರು ಹಾಗೂ ಸಿಬ್ಬಂದಿಗಳು ಆತಂಕದಲ್ಲಿ ಕಾರ್ಯನಿರ್ವಹಿಸುವ ಪರಿಸ್ಥಿತಿ ಉಂಟಾಗಿರುತ್ತದೆ. ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಸುಗಮವಾಗಿ ಕಾರ್ಯನಿರ್ವಹಿಸಲು ಅನುಕೂಲ ಮಾಡಿಕೊಡಬೇಕು. ಹಾಗೂ ಆಸ್ಪತ್ರೆಯಲ್ಲಿ ಕೆಲಸದ ಅವಧಿಯಲ್ಲಿ ಸೂಕ್ತ ಭದ್ರತೆ ಒದಗಿವುದು ಮತ್ತು ಸಾರ್ವಜನಿಕ ಆಸ್ಪತ್ರೆಗೆ ಔಟ್ ಪೋಲೀಸ್ ಚೌಕಿ ವ್ಯವಸ್ಥೆ ಕಲ್ಪಿಸಿ ಕೊಡಲು ಅವರು ಮನವಿಯಲ್ಲಿ ಆಗ್ರಹಿಸಿದರು. ಈ ಸಂದರ್ಭದಲ್ಲಿ ಸಾರ್ವಜನಿಕ ಆಸ್ಪತ್ರೆಯ ಎಲ್ಲಾ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

# ಬಾಲ್ಯವಿವಾಹ ಮುಕ್ತ ತಾಲೂಕು ಮಾಡಲು ಕೈ ಜೋಡಿಸಿ :ಸುಜಾತ ಹೂನೂರು



ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ತಾಲೂಕು ಕಾನೂನು ಸೇವಾ ಸಮಿತಿ, ಲಿಂಗಸಗೂರು ನ್ಯಾಯವಾದಿಗಳ ಸಂಘ, ತಾಲೂಕು ಆಡಳಿತ, ಶಿಕ್ಷಣ ಇಲಾಖೆ, ಪೊಲೀಸ್ ಇಲಾಖೆ, ಮತ್ತು ಕಸ್ತೂರಬಾ ಗಾಂಧಿ ಬಾಲಕಿಯರ ವಿದ್ಯಾಲಯ ಹಾಗೂ ಸರಕಾರಿ ಪ್ರೌಢ ಶಾಲೆ ಬಯ್ಯಾಪೂರು, ಇವರ ಸಂಯುಕ್ತಾಶ್ರಯ ದಲ್ಲಿ ಬಾಲ್ಯವಿವಾಹ ನಿಷೇಧ ಕಾಯ್ದೆ, ಪೋಕ್ಸೊ ಕಾಯ್ದೆ ಕುರಿತು ಕಾನೂನು ಅರಿವು ಕಾರ್ಯಕ್ರಮವನ್ನು ಸಸಿಗೆ ನೀರು ಹಾಕುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು.**



ಬಾಲ್ಯ ವಿವಾಹ ನಿಷೇಧ ಕಾಯ್ದೆ, 2006, ನವೆಂಬರ್ 1, 2007 ರಂದು ಜಾರಿಗೆ ಬಂದಿತು, ಬಾಲ್ಯ ವಿವಾಹಗಳನ್ನು ನಿಷೇಧಿಸಲು ಮಾತ್ರವಲ್ಲ, ಅವುಗಳನ್ನು ತಡೆಯಲು ಸಹ. ಭಾರತದಲ್ಲಿ ಬಾಲ್ಯ ವಿವಾಹಗಳ ಸಮಸ್ಯೆಯನ್ನು ಪರಿಣಾಮಕಾರಿಯಾಗಿ ನಿಭಾಯಿಸುವುದು ಮತ್ತು ಸಮಗ್ರ ಕಾರ್ಯ ವಿಧಾನವನ್ನು ಜಾರಿಗೆ ತರುವುದು ಈ ಕಾಯ್ದೆಯ ಉದ್ದೇಶವಾಗಿದೆ. 18 ವರ್ಷ ತುಂಬದ ಹೆಣ್ಣು ಮತ್ತು 21 ವರ್ಷ ತುಂಬದ ಗಂಡು ಬಾಲ್ಯ ವಿವಾಹಗಳನ್ನು ನಡೆಸುವುದನ್ನು ಕಾಯ್ದೆ ನಿಷೇಧಿಸುತ್ತದೆ. ಬಾಲ್ಯ ವಿವಾಹಗಳನ್ನು ತಡೆಗಟ್ಟುವುದು ಮತ್ತು ಈ ವಿಷಯದ ಬಗ್ಗೆ ಜಾಗೃತಿ ಮೂಡಿಸುವುದು ಕರ್ತವ್ಯವಾಗಿರುವದು ಎಂದು ಹೇಳಿದರು.

ಈ ಸಂದರ್ಭದಲ್ಲಿ ವೆಂಕಟೇಶ ಪಿ.ಎಸ್.ಐ ಮುದಗಲ್, ಶಿವಶಂಕರ ಹೆಚ್. ಪ್ರಭಾರಿ ಮುಖ್ಯಗುರುಗಳು, ಪಾರ್ವತಿ ಸ.ಶಿ ಆರ್.ಎಮ.ಎಸ್.ಎ, ಹಾಸ್ಟೆಲ್ ಪ್ರಭಾರಿ ನೂಡಲ್ ಅಧಿಕಾರಿ ಬಯ್ಯಾಪೂರು ಮಹಾಂತೇಶ ಬಳ್ಳೊಳ್ಳಿ ಶಿಕ್ಷಣ ಸಂಯೋಜಕರು, (ನಾಗರಾಳ ವಲಯ) ಅಪ್ಪಣ್ಣ ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳು, ಎ.ಆರ್. ಹವಾಲ್ದಾರ ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳು, (ಜಿಲ್ಲಾ ಸಂಪನ್ಮೂಲ ವ್ಯಕ್ತಿ ಪೋಕ್ಸೊ ಕಾಯ್ದೆ) ವಿಜಯ ಮೇಟಿ ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿಗಳು, ಬಯ್ಯಾಪೂರು ವಲಯ ಜಿ. ಸೌಂಧರಿ ಕೆ.ಜಿ.ಬಿ.ವಿ, ಮುಖ್ಯಗುರುಗಳು ಬಯ್ಯಾಪೂರು, ಸೈಯದ್ ವದುದ್ ವಕೀಲರು, ವೀರೇಶ ಹಡಪದ ವಕೀಲರು, ಜರ್ತಾನ ಅಫ್ರೀನ್ ವಕೀಲರು, ಮೈಬೂಬಸಾಬ ಬಾಗವಾನ ಸೇರಿದಂತೆ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಭಾಗಿಯಾಗಿದ್ದರು.

## ಕಲಾಮ್ ಫೌಂಡೇಶನ್ ದಿಂದ ಸಂಗನಗೌಡರಿಗೆ ಸನ್ಮಾನ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪಟ್ಟಣದ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಫೌಂಡೇಶನ್(ರಿ) ಇದರ 9 ನೇ ವಾರ್ಷಿಕೋತ್ಸವದ ಪ್ರಯುಕ್ತ ಹಮ್ಮಿಕೊಂಡ ವಿವಿಧ ಕ್ಷೇತ್ರಗಳ ಸಾಧಕರಿಗೆ ಸನ್ಮಾನ ಹಾಗೂ ಪ್ರಶಸ್ತಿ ಪ್ರಧಾನ ಕಾರ್ಯಕ್ರಮದಲ್ಲಿ ಸಮಾಜ ಸೇವಕ ಸಂಗನಗೌಡ ಲಿಂಗದಳ್ಳಿ ಇವರನ್ನು, ಗೌರವಿಸಲಾಯಿತು.**



ಧಾರ್ಮಿಕ ಮುಖಂಡ ಸೈಯದ್ ಶಕೀಲ ಅಹ್ಮದ್ ಖಾಜಿ, ಸಿದ್ದನಗೌಡ ಪಾಟೀಲ (ನಾವದಗಿ), ಪ್ರಭುಗೌಡ ಮದರಕಲ್ಲ,ಸಂಗನಗೌಡ ಲಿಂಗದಳ್ಳಿ, ಮುಸ್ಲಿಂ ಬ್ಯಾಂಕ್ ಅಧ್ಯಕ್ಷ ಮೆಹಬೂಬ ಕೆಂಭಾವಿ, ಮಹಾಂತೇಶ ಮುರಾಳ, ಇಬ್ರಾಹೀಮ ಮನ್ನೂರ, ಹಸನಸಾಬ ಕೋರ್ಕಿ, ನಾಸೀರ ಹುಸೇನ ಇನಾಮದಾರ, ಮಹೆಬೂಬಸಾಬ ಖಾದ್ರಿ, ಫೌಂಡೇಶನ್ ಅಧ್ಯಕ್ಷ ಮೊಹಮ್ಮದ್ ಶಫೀಕ ಇನಾಮದಾರ,ಶೌಕತ್ ಲಾಹೋರಿ ಹಾಗೂ ಫೌಂಡೇಶನ್ ದ ಪದಾಧಿಕಾರಿಗಳು ಇದ್ದರು.

# ವಟಗಲ್ –ಗ್ರಾ.ಪಂ ನಲ್ಲಿ ಕೂಲಿಕಾರರಿಗೆ ಕೇವಲ 60 ರೂಪಾಯಿ ಕೂಲಿ ಕೂಲಿಕಾರರಿಂದ ಪ್ರತಿಭಟನೆ

ನೈಜ್ಯ ದೆಸೆ ನ್ಯೂಸ್

**ಕವಿತಾಳ: ಪಟ್ಟಣ ಸಮೀಪದ ಮಸ್ಕಿ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ವಟಗಲ್ ಗ್ರಾಮ ಪಂಚಾಯತಿ ಮುಂದೆ ಇಂದು ಕೂಲಿಕಾರರು ಪ್ರತಿಭಟನೆ ನೆಡೆಸಿದರು.**

ಉದ್ಯೋಗ ಖಾತರಿ ಕೆಲಸದ ಕೂಲಿಕಾರರಿಗೆ ಕೇವಲ 60ರೂಪಾಯಿ ಕೂಲಿ ಹಾಕಿ ಅನ್ಯಾಯ ಮಾಡಿದ್ದು ಮತ್ತು ಸಾರ್ವಜನಿಕರ, ಶಾಲಾ ಮಕ್ಕಳ ,ಸೌಕರ್ಯಗಳನ್ನು ನೀಡುವಲ್ಲಿ ಸ್ಥಳಿಯ ಆಡಳಿತ ವಿಫಲವಾಗಿದ್ದು, ಅಧಿಕಾರಿಗಳು ಗ್ರಾಮದಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸದೆ 15ನೇ ಹಣಕಾಸಿನಲ್ಲಿ ಲೂಟಿ ಮಾಡಿ ಅಭಿವೃದ್ಧಿ ಕೆಲಸಗಳನ್ನು ಮಾಡದೆ ಅನ್ಯಾಯ ಎಸಗಿದ್ದಾರೆ, ನರೇಗಾ ಯೋಜನೆಯಡಿ ಮಾಡಿದ ಕಾಮಗಾರಿಗಳೆಲ್ಲವೂ ಗ್ರಾಮ ಪಂಚಾಯತಿ ಸದಸ್ಯರ ಮತ್ತು ಅವರ ಸಂಬಂಧಿಕರ ಜಮೀನುಹಳ ಹತ್ತಿರ ಮರಂ ರಸ್ತೆ ಕಳಪೆ ಕಾಮಗಾರಿ ಮಾಡಿ, ಸಿಸಿ ರಸ್ತೆಗಳನ್ನು ಕೂಡ ಸದಸ್ಯರುಗಳ ಮನೆಯ ಅಕ್ಕಪಕ್ಕ ಮಾಡಿಕೊಂಡಿರುತ್ತಾರೆ ಎಂದು ಪ್ರತಿಭಟನೆಕಾರರು ಆರೋಪಿಸಿದ್ದಾರೆ.



ಗ್ರಾಮಸಭೆಯಲ್ಲಿ ಚರ್ಚಿಸಿದ ಕಾಮಗಾರಿಗಳನ್ನು ಮಾಡದೆ ತಮಗೆ ಅನುಕೂಲವಾದ ಸ್ಥಳದಲ್ಲಿ ಕಾಂಗಾರಿಗಳನ್ನು ಮಾಡಿ ಅನ್ಯಾಯವೆಸಗಿದ್ದಾಋಎ ಮತ್ತು ಉನ್ನತಿಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮೂಲಬೂತ ಸೌಕರ್ಯಗಳಾದ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆಗಾಗಿ ಮೂರು ವರ್ಷಗಳಿಂದ ಎಸ್ ಡಿ ಎಂಸ ಇಸದಸ್ಯರುಗಳು ಎಷ್ಟು ಕೆಳಿಕೊಂಡರು ಅವುಗಳತ್ತ ಗಮನ ಹರಿಸದೆಕಮಿಷನ್ ಆಸೆಗಾಗಿ ಗಟ್ಟಿಮುಟ್ಟಾದ ಕಂಪೌಡ್ ಕೆಡವಿ ಮತ್ತೆ ಮಾಡುವ ನೆಪವೊಡ್ಡಿ ಹಣ ಲೂಟಿ ಮಡುವ ಹುನ್ನಾರ ಹೊಂದಿದ್ದು ಅಧಿಕಾರಿಗಳು ಗಮನ ಹರಿಸಿ ಸೂಕ್ತ ಕ್ರಮಕ್ಕೆ ಮುಂದಾಗಬೇಕು ಎಂದು ಒತ್ತಾಯಿಸಿದ್ದಾರೆ.

ಇಷ್ಟೆ ಅಲ್ಲದೆ ಇನ್ನು ಹತ್ತಾರೂ ಹಗರಣಗಳು ವಟಗಲ್ ಗ್ರಾಮ ಪಂಚಾಯತಿಯಲ್ಲಿ ನಡೆದಿದ್ದು ಸೂಕ್ತ ತನಿಖೆ ಮಾಡುವ ಮೂಲಕ ಕಾನೂಕ್ರಮಕ್ಕೆ ಮುಂದಾಗಬೇಕೆ ಎಂದು ಅಧಿಕಾರಿಗಳನ್ನು ಒತ್ತಾಯಿಸಲಾಗುವುದೆ ಎಂದು ಪ್ರತಿಭಟನೆಕಾರರು ತಿಳಿಸಿದ್ದಾರೆ. ಪ್ರತಿಭಟನೆಯಲ್ಲಿ ನೂರಾರು ಜನ ಪುರುಷ ಮತ್ತು ಮಹಿಳಾ ಕೂಲಿಕಾರರು ಬಾಗವಹಿಸಿದ್ದು ತಾಲ್ಲೂಕು ಪಂಚಾಯತಿ ಇಓ ಅಥ–ವಾ ತಹಸೀಲ್ದಾರರು ಸ್ಥಳಕ್ಕೆ ಭೇಟಿ ಸಮಸ್ಯೆ ಪರಿಹರಿಸುವವರೆಗೆ ಪ್ರತಿಭಟನೆಯನ್ನು ಮುಂದುವರೆಸುವುದಾಗಿ ತಿಳಿಸಿದ್ದಾರೆ.

## ಗುಂಡ ಗ್ರಾಮದ ವ್ಯಾಪ್ತಿಯ ಹೊಕ್ರಾಣಿ ಮೀಸಲು ಅರಣ್ಯ ಪ್ರದೇಶದಲ್ಲಿ ಚಿರತೆ ಪ್ರತ್ಯಕ್ಷ ಜನರಲ್ಲಿ ಆತಂಕ

ನೈಜ್ಯ ದೆಸೆ ನ್ಯೂಸ್

**ಮಸ್ಕಿ: ತಾಲೂಕಿನ ಗುಂಡ ಗ್ರಾಮದ ವ್ಯಾಪ್ತಿಯ ಹೊಕ್ರಾಣಿ ಮೀಸಲು ಅರಣ್ಯ ಪ್ರದೇಶದಲ್ಲಿ ಚಿರತೆ ಪ್ರತ್ಯಕ್ಷವಾಗಿರುವ ಹಿನ್ನೆಲೆಯಲ್ಲಿ ಗ್ರಾಮಸ್ಥರಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿದೆ. ಈ ಕುರಿತು ಮುನ್ನೆಚ್ಚರಿಕಾ ಕ್ರಮವಾಗಿ ಸಂಬಂಧಪಟ್ಟ ಗುಡುದೂರು ಹೋಬಳಿಯ ಎಲ್ಲಾ ಗ್ರಾಮಗಳಲ್ಲಿ ಡಂಗೂರ ಅಥವಾ ಮೈಕ್ ಮೂಲಕ ಜಾಗೃತಿ ಮೂಡಿಸಲು ಅಧಿಕಾರಿಗಳು ಸೂಚಿಸಿದ್ದಾರೆ.**



ಗ್ರಾಮಸ್ಥರು ಅನಗತ್ಯವಾಗಿ ಅರಣ್ಯ ಪ್ರದೇಶದ ಕಡೆಗೆ ತೆರಳಬಾರದು, ಜಾನುವಾರುಗಳನ್ನು ಕಾಡು ಪ್ರದೇಶದ ಸಮೀಪ ಮೇಯಿಸಲು ಬಿಡಬಾರದು ಹಾಗೂ ರಾತ್ರಿ ಸಮಯದಲ್ಲಿ ಒಬ್ಬರೇ ಸಂಚರಿಸಬಾರದು ಎಂದು ಎಚ್ಚರಿಕೆ ನೀಡಲಾಗಿದೆ. ಶಾಲಾ ಮಕ್ಕಳಿಗೆ ವಿಶೇಷ ಜಾಗೃತಿ ಮೂಡಿಸಿ, ಪೋಷಕರು ಮಕ್ಕಳ ಚಲನವಲನದ ಮೇಲೆ ಗಮನ ಹರಿಸುವಂತೆ ತಿಳಿಸಲಾಗಿದೆ. ಚಿರತೆ ಕಾಣಿಸಿಕೊಂಡ ಪ್ರದೇಶದ ಸುತ್ತಮುತ್ತ ಅರಣ್ಯ ಇಲಾಖೆ ಸಿಬ್ಬಂದಿ ಹಾಗೂ ಪೊಲೀಸರು ನಿಗಾವಹಿಸಿದ್ದು, ಪ್ರಾಣಿಯನ್ನು ಸುರಕ್ಷಿತವಾಗಿ ಹಿಡಿದು ಅರಣ್ಯ ಪ್ರದೇಶದ ಒಳಭಾಗಕ್ಕೆ ಬಿಡುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಚಿರತೆ ಪ್ರತ್ಯಕ್ಷಗೊಂಡ ಸ್ಥಳದಲ್ಲಿ ಜನಸಮೂಹ ನಿಯಂತ್ರಣ ಮಾಡಿ, ಶಾಂತಿ ಮತ್ತು ಭದ್ರತೆ ಕಾಪಾಡಲು ತಾಲೂಕು ಆಡಳಿತ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ. ಯಾವುದೇ ವದಂತಿಗಳಿಗೆ ಒಳಗಾಗದೇ, ಅನುಮಾನಾಸ್ಪದ ಚಲನವಲನ ಕಂಡುಬಂದಲ್ಲಿ ತಕ್ಷಣವೇ ಅರಣ್ಯ ಇಲಾಖೆ ಅಥವಾ ಪೊಲೀಸ್ ಇಲಾಖೆಗೆ ಮಾಹಿತಿ ನೀಡುವಂತೆ ಮನವಿ ಮಾಡಲಾಗಿದೆ. ಅರಣ್ಯ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ಕರ್ತವ್ಯದಲ್ಲಿ ಲೋಪ ಕಂಡುಬಂದಲ್ಲಿ, ಅವರ ವಿರುದ್ಧ Disaster Management Act, 2005 ಅನ್ವಯ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ತಾಲೂಕು ವಿಪತ್ತು ನಿರ್ವಹಣಾ ಸಮಿತಿ ಎಚ್ಚರಿಸಿದೆ.

# ಮೊಘಲರ ಸುಲ್ತಾನರ ವಿರುದ್ದ ಹೋರಾಡಿ ಹಿಂದೂ ಸಾಮ್ರಾಜ್ಯವನ್ನು ಕಟ್ಟಿದ ವೀರ ಪರಾಕ್ರಮಿ ಶಿವಾಜಿ

ನೈಜ್ಯ ದೆಸೆ ನ್ಯೂಸ್

**6ಮೊಘಲರ ಮತ್ತು ಸುಲ್ತಾನರ ವಿರುದ್ಧ ತನ್ನ ಚಿಕ್ಕ ಸೈನ್ಯವನ್ನು ಒಗ್ಗೂಡಿಸಿಕೊಂಡು ಪರಿಮಿತವಾದ ಸಂಪನ್ಮೂಲಗಳನ್ನು ಬಳಸಿಕೊಂಡು ಅವರ ವಿರುದ್ಧ ಹೋರಾಡಿದ ಪರಾಕ್ರಮಿ ನಾಯಕ ಛತ್ರಪತಿ ಶಿವಾಜಿ ಎಂದು ತಹಶೀಲ್ದಾರ್ ಅರುಣ್ ಕುಮಾರ್ ದೇಸಾಯಿ ಹೇಳಿದರು.**

ನಗರದ ತಹಶೀಲ್ದಾರ್ ಕಚೇರಿಯಲ್ಲಿ ತಾಲೂಕು ಆಡಳಿತದಿಂದ ಛತ್ರಪತಿ ಶಿವಾಜಿಯವರ 399ನೇ ಜಯಂತಿಯನ್ನು ಹಮ್ಮಿಕೊಂಡು ಅತ್ಯಂತ ಸರಳ ಮತ್ತು ಅರ್ಥಪೂರ್ಣವಾಗಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡಿ ಆಚರಿಸಿ ಮಾತನಾಡಿದ ಅವರು, ಭಾರತೀಯತೆ ಮತ್ತು ಸ್ವದೇಶಿ ಬಗ್ಗೆ ಅತಿ ಹೆಚ್ಚು ಕಾಳಜಿ ವಹಿಸಿದ್ದರು. ದಕ್ಷಿಣ ಭಾಗವನ್ನು ಕೈವಶ ಮಾಡಿಕೊಂಡು ಹಿಂದೂ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಜೊತೆಜೊತೆಗೆ ಭವ್ಯ ಭಾರತ ನಿರ್ಮಾಣದ ಕನಸನ್ನು ಆ ಕಾಲದಲ್ಲೇ ಕಂಡಿದ್ದರು. ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಾವು ನೀವೆಲ್ಲರೂ ನಡೆಯೋಣ ಅವರ ಭವ್ಯ ಭಾರತದ ಕನಸನ್ನು ನನಸಾಗಿಸೋಣ ಎಂದರು. ಪಿ.ಎಲ್.ಡಿ.ಬ್ಯಾಂಕ್ ಅಧ್ಯಕ್ಷ ಎಂ.ದೊಡ್ಡಬಸವರಾಜ ಮಾತನಾಡಿ, ದೇಶ ಭಕ್ತಿ ಶಿವಾಜಿ ಮಹಾರಾಜರಿಗೆ ಅಪಾರವಾಗಿತ್ತು. ಅವರ ಕೆಚ್ಚೆದೆಯ ಹೋರಾಟ ಯುವಕರಿಗೆ ಸ್ಪೂರ್ತಿ, ನಮ್ಮ ದೇಶದ ಸ್ವತಂತ್ರವನ್ನು ಸ್ವಾಭಿಮಾನವನ್ನು ಉಳಿಸಿಕೊಳ್ಳಲು ಹೋರಾಡಿದ ಹೋರಾಟ ಜಗತ್ತಿಗೆ ಆದರ್ಶಪ್ರಾಯವಾಗಿದೆ.



ಯುವಕರು ಶಿವಾಜಿಯಂತಹ ದೇಶ ಭಕ್ತನನ್ನ ಆದರ್ಶವಾಗಿಟ್ಟುಕೊಂಡು ಭವ್ಯ ಭಾರತದ ನಿರ್ಮಾಣಕ್ಕಾಗಿ ಸಂಕಲ್ಪತೊಡಬೇಕು ಎಂದರು. ನಂತರ ಗಂಗಾವತಿ ರಸ್ತೆ ರೈಲ್ವೆ ನಿಲ್ದಾಣಕ್ಕೆ ಹೋಗುವ ದಾರಿಯಲ್ಲಿರುವ ಶಿವಾಜಿ ಮಹಾರಾಜರ ಪುತ್ಥಳಿಗೆ ಶರಣರು, ಮುಖಂಡರು, ಸಮಾಜದ ಬಂಧುಗಳು ಪೂಜೆ ಸಲ್ಲಿಸಿ, ಹೂವಿನ ಹಾರ ಹಾಕುವ ಮೂಲಕ ಗೌರವ ಸಮರ್ಪಣೆ ಸಲ್ಲಿಸಿದರು. ಇದೇ ವೇಳೆ: ಬಂಗಾರಿ ಕ್ಯಾಂಪ್ ಸದಾನಂದ ಶರಣರು, ಕಾಂಗ್ರೆಸ್ ಮುಖಂಡ ಸೋಮನಗೌಡ ಬಾದರ್ಲಿ, ಪಂಪನಗೌಡ ಬಾದರ್ಲಿ, ಪೌರಾಯುಕ್ತ ಪಾಂಡುರಂಗ ಇಟಗಿ, ಪಿಎಲ್ ಡಿ ಬ್ಯಾಂಕ್ ಅಧ್ಯಕ್ಷ ದೊಡ್ಡಬಸವರಾಜ, ಜೆಡಿ–ಎಸ್ ಯುವ ಮುಖಂಡ ಅಭಿಷೇಕ ನಾಡಗೌಡ, ಬಿಜೆಪಿ ಮುಖಂಡ ಹನುಮೇಶ, ಮರಾಠಾ ಸಮಾಜದ ಜಿಲ್ಲಾಧ್ಯಕ್ಷ ನಾಗೋಜಿರಾವ್ ಮರಾಠ, ತಾಲೂಕು ಅಧ್ಯಕ್ಷ ಶ್ರೀನಿವಾಸ ಮರಾಠ,



ಶೇಖರ್ ಪವಾರ್, ನಾರಾಯಣರಾವ್ ಪವಾರ್, ಶ್ರೀ ಛತ್ರಪತಿ ಶಿವಾಜಿ ಮಹಾರಾಜ್ ಸೇವಾ ಟ್ರಸ್ಟ್ ಅಧ್ಯಕ್ಷ ವಿಶ್ವನಾಥ ಚೌಧರಿ, ಪ್ರಧಾನ ಕಾರ್ಯದರ್ಶಿ ದೇವರಾಜ ಪಾಟೀಲ್, ಉಪಾಧ್ಯಕ್ಷರಾದ ಶಶಿಧರ, ಉಮೇಶ ಪವಾರ್, ಹಾಗೂ ಮಹಾವೀರ, ಕಾರ್ಯದರ್ಶಿ ಕೆ.ಜಗದೀಶ, ಸಹ ಕಾರ್ಯದರ್ಶಿ ರವಿ ಉಪ್ಪಾರ್, ಖಜಾಂಚಿ ಕಿಶೋರ್, ಸಹ ಖಜಾಂಚಿ ನಾಗೇಶ ಪವಾರ್, ಕಾನೂನು ಸಲಹೆಗಾರ ಗಿರೀಶ ಇಚನಾಳ, ಕಾರ್ಯಕಾರಿ ಮಂಡಳಿ ಸದಸ್ಯ ಸುಕರಾಜ್, ಟ್ರಸ್ಟಿನ ಸದಸ್ಯರಾದ ವಿನೋದ್ ಬಾಂಡ್ ಗೆ, ಸುಭಾಷ್ ಪವಾರ್, ಮನೋಹರ ಹಿರೇಮಠ, ಶಿವಕುಮಾರ, ವೀರೇಶ, ಉದಯಕುಮಾರ ಸೇರಿದಂತೆ ಅನೇಕ ಮುಖಂಡರು ಉಪಸ್ಥಿತರಿದ್ದರು.

## ನೇಮಕಾತಿ ಪ್ರಕಟಣೆ

KSRLPS ನೇಮಕಾತಿ 2026–22 ಬ್ಲಾಕ್ ಮ್ಯಾನೇಜರ್, ಆಫೀಸ್ ಅಸಿಸ್ಟೆಂಟ್ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ KSRLPS ನೇಮಕಾತಿ 2026: 22 ಬ್ಲಾಕ್ ಮ್ಯಾನೇಜರ್, ಆಫೀಸ್ ಅಸಿಸ್ಟೆಂಟ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಪ್ರಚಾರ ಸಂಘವು ಫೆಬ್ರವರಿ 2026 ರ KSRLPS ಅಧಿಕೃತ ಅಧಿಸೂಚನೆಯ ಮೂಲಕ ಬ್ಲಾಕ್ ಮ್ಯಾನೇಜರ್, ಆಫೀಸ್ ಅಸಿಸ್ಟೆಂಟ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ವಿಜಯಪುರ ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 05–ಮಾರ್ಚ್–2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 18–02–2026 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 05–ಮಾರ್ಚ್–2026 ಅಧಿಕೃತ ವೆಬ್‌ಸೈಟ್: ksrlps.karnataka.gov.in

## ಬೇಸಿಗೆ ಸಮಯದಲ್ಲಿ ನೀರಿನ ಅಭಾವ ಸೃಷ್ಟಿಯಾದರೆ ಗ್ರಾ.ಪಂ.ಪಿಡಿಒಗಳ ವಿರುದ್ಧ ಕಠಿಣ ಕ್ರಮ ಶಾಸಕ ವಜ್ಜಲ್

**ನೈಜ್ಯ ದೆಸೆ ನ್ಯೂಸ್**

**ಲಿಂಗಸಗೂರು: ತಾಲೂಕಿನ ಗ್ರಾಮೀಣ ಭಾಗಗಳಲ್ಲಿ ಬೇಸಿಗೆಯ ಸಮಯದಲ್ಲಿ ಯಾವುದೇ ಕಾರಣಕ್ಕೂ ಕುಡಿಯುವ ನೀರಿನ ತೊಂದರೆಯಾಗಬಾ ರದು. ಒಂದು ವೇಳೆ ಕುಡಿಯುವ ನೀರಿನ ಸಮಸ್ಯೆಗಳ ಅಭಾವ ಸೃಷ್ಟಿಯಾಗಿ ಕುರಿತು ದೂರು ಕೇಳಿ ಬಂದರೆ ನಿರ್ದಾ ಕ್ಷಣ್ಯವಾಗಿ ಗ್ರಾಮ ಪಂಚಾಯತ್ ಅಭಿ ವೃದ್ಧಿ ಅಧಿಕಾರಿಗಳ ವಿರುದ್ದ ಕಠಿಣ ಕ್ರಮ ಕೈಗೊಳ್ಳಲಾಗುವುದೆಂದು ಶಾಸಕ ಮಾನಪ್ಪ ವಜ್ಜಲ್ ಅವರು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಖಡಕ್ಕಾಗಿ ಎಚ್ಚರಿಕೆ ನೀಡಿದರು.**



ತಾಲೂಕ ಪಂಚಾಯತ್ ಸಭಾಂಗಣದಲ್ಲಿ ಜರುಗಿದ – ಕುಡಿಯುವ ನೀರಿನ ತಾಲೂಕ ಮಟ್ಟದ ಟಾಸ್ಕ್ ಫೋರ್ಸ್ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಅವರು ಮುಂಬರುವ ದಿನಗಳಲ್ಲಿ ಬೇಸಿಗೆ ಸಮಯದಲ್ಲಿ ಉದ್ಭವಿಸಬಹುದಾದ ಕುಡಿಯುವ ನೀರಿನ ಸಮಸ್ಯೆಗಳ ಪರಿಹಾರಕ್ಕಾಗಿ ಕೈಗೊಂಡಿರುವ ಮುಂಜಾಗ್ರತ ಕ್ರಮಗಳ ಕು–ರಿತು ಅವರು ಅಧಿಕಾರಿಗಳೊಂದಿಗೆ ಪರಿಶೀಲನೆ ನಡೆಸಿದರು. ನಾಗರಹಾಳ ಗ್ರಾ. ಪಂ. ವ್ಯಾಪ್ತಿಯ ನವಲಿ ಜಾಕವೆಲ್ ಹತ್ತಿರ ವಿದ್ಯುತ್ ಪರಿವರ್ತಕ ಸುಟ್ಟಿದ್ದು ಹಲವು ಬಾರಿ ಜೆಸ್ಕಾಂ ಅಧಿಕಾರಿಗಳಿಗೆ ಪತ್ರ ಬರೆದರು ಸಹ ಸ್ಪಂದಿಸುತ್ತಿಲ್ಲ ಎಂದು ಪಿಡಿಓ ಅವರು ಶಾಸಕರ ಗಮನಕ್ಕೆ ತಂದಾಗ ಸಭೆಯಲ್ಲಿ ಹಾಜರಿದ್ದ ಜೆಸ್ಕಾಂ ಇಲಾಖೆಯ ಅಧಿಕಾರಿ ಸರಿಯಾದ ಮಾಹಿತಿ ಇಲ್ಲದೆ ಸಭೆಗೆ ಬಂದಿದ್ದರಿಂದ ಜೆಸ್ಕಾಂ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡು ಸರಿಯಾದ ಮಾಹಿತಿ ಇಲ್ಲದೆ ಸಭೆಗೆ ನಾಮಕ ವಾಸ್ತೆ ಗೆ ಬಂದಿದ್ದೀರಾ..? ವಿದ್ಯುತ್ ಸಮಸ್ಯೆಯಿಂದಾಗಿ ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿನ ಅಭಾವ ಸೃಷ್ಟಿಯಾಗುತ್ತಿದ್ದು ಗ್ರಾ.ಪಂ. ಪಿಡಿಓ ಅವರು ಎರಡು ಬಾರಿ ಪತ್ರ ಬರೆದರೂ ಸಹ ಯಾಕೆ ಕ್ರಮ ಕೈಗೊಂಡಿಲ್ಲ ನಿಮ್ಮಿಂದ ಪರಿಹಾರ ಸಿಗುವುದು ಯಾವಾಗ ಬೇಸಿಗೆ ಸಂದರ್ಭದಲ್ಲಿ ಎರಡು ನೂರರಿಂದ 300 ಫೀಟ್ ವರೆಗೆ ಬೋರ್ವೆಲ್ ಹಾಕಿ ಕುಡಿಯುವ ನೀರಿಗೆ ಪ್ರಯತ್ನಿಸಿದರು ಸಹ ನೀವು ಸರಿ ಯಾಗಿ ವಿದ್ಯುತ್ ಒದಗಿಸದಿದ್ದರೆ ಹೇಗೆ..? ಗ್ರಾಮೀಣ ಭಾಗದ ಹಳ್ಳಿಗಳ ಜನತೆಗೆ ಕುಡಿಯುವ ನೀರಿನ ವಿಚಾರದಲ್ಲಿ ಬೇಜವಾಬ್ದಾರಿ ತೋರಿಸಬೇಡಿ. ಒಂದು ವೇಳೆ ಇದೇ ರೀತಿ ಬೇಸಿಗೆ ಸಂದರ್ಭದಲ್ಲಿ ನಿರ್ಲಕ್ಷ ವಹಿಸಿದರೆ ಜೆಸ್ಕಾಂ ಇಲಾಖೆಯವರ ವಿರುದ್ಧವು ಕ್ರಮ ಕೈಗೊಳ್ಳಲಾಗುವುದೆಂದು ಅವರು ಅಧಿಕಾರಿಗಳಿಗೆ ಎಚ್ಚರಿಸಿದರು. ತಕ್ಷಣವೇ ತಾಲೂಕಿನ ಎಲ್ಲಾ ಗ್ರಾ. ಪಂ. ಅಭಿವೃದ್ಧಿ ಅಧಿಕಾರಿಗಳು ಎಲ್ಲಿ ನೀರಿನ ಸಮಸ್ಯೆ ಇದೆಯೋ ತಕ್ಷಣವೇ ಹಿರಿಯ ಅಧಿಕಾರಿಗಳಿಗೆ ವರದಿ ಮಾಡಿ. 15ನೇ ಹಣ–ಕಾಸಿನಲ್ಲಿ ಪಂ.ಗಳಿಗೆ ಬಿಡುಗಡೆ ಯಾದ ಹಣವನ್ನು ಸರಿಯಾದ ರೀತಿಯಲ್ಲಿ ಬಳಕೆ ಮಾಡಬೇಕು. ಅದೇ ರೀತಿ ವಿಬಿ ಜಿ ರಾಮಜಿ ಯೋಜನೆಯು ಕಟ್ಟುನಿ ಟ್ಟಾಗಿ ಸರ್ಕಾರದ ಆದೇಶದಂತೆ ಪಾಲಿಸ ಬೇಕು ಏನಾದರೂ ದೂರುಗಳು ಕೇಳಿ ಬಂದರೆ ನಿರ್ಧಾಕ್ಷಣವಾಗಿ ಕ್ರಮ ಕೈಗೊಳ್ಳ ಲಾಗುವುದೆಂದು ಅವರು ಸಭೆಯಲ್ಲಿ ಹಾಜರಿದ್ದ ಪಿಡಿಒಗಳಿಗೆ ಹಾಗೂ ಆಡಳಿತ ಅಧಿಕಾರಿಗಳಿಗೆ ಸೂಚಿಸಿದರು. ಈ ಸಂದರ್ಭದಲ್ಲಿ ಯೋಜನೆ ಅನುಷ್ಠಾನಾಧಿಕಾರಿ ವಿಜಯಶಂಕರ್, ತಾಲೂಕ ಪಂ. ಕಾರ್ಯನಿರ್ವಾಹಕ ಅಧಿಕಾರಿ ಉಮೇಶ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

# 3 ಹಂತದ ಚುನಾವಣೆ ಮುಂದೂಡಿಕೆ ಸಾಮಾಜಿಕ ನ್ಯಾಯದ ವಿರೋಧಿ ನಡೆಯಾಗಿದೆ: ರವಿಗೌಡ ಮಲ್ಲದಗುಡ್ಡ

**ನೈಜ್ಯ ದೆಸೆ ನ್ಯೂಸ್**

**ಕೇಂದ್ರ ಸರ್ಕಾರದಿಂದ ತಾ.ಪಂ.ಮತ್ತು ಜಿ.ಪಂ.ಗಳ 15ನೇ ಹಣಕಾಸಿನ ಅನುದಾನ 5 ಸಾವಿರ ಕೋಟಿ ಬರದಿರುವುದಕ್ಕೆ ನೇರ ಹೊಣೆಗಾ–ರಿಕೆ ನಿಗದಿತ ಸಮಯದಲ್ಲಿ ಚುಣಾವಣೆ ನಡಸದಿರುವುದೇ ಕಾರಣ ಎಂದು ತಾಲೂಕಿನ ವಿರುಪಾಪುರ ಗ್ರಾಮ ಪಂಚಾಯತಿ ಮುಂದೆಯೇ ಗ್ರಾಮ ಸ್ವರಾಜ್ಯ ಕರ್ನಾಟಕ ವೇದಿಕೆ ಸಿಂಧನೂರು, ವಿರುಪಾಪುರ ಗ್ರಾಮ ಪಂಚಾಯತಿ ಸರ್ವ ಮಾಜಿ ಸದಸ್ಯರು, ಗ್ರಾಮಸ್ಥರು, ಮಹಿಳೆಯರು, ಯುವಕರು, ಸೇರಿ ಪ್ರತಿಭಟನೆ ನಡೆಸಿದರು.**

ಫೆ.19 ಗುರುವಾರದಂದು ಪ್ರತಿಭಟನೆ ನಡೆಸಿ, ಶಾಸಕ ಕೇಂದ್ರಿತ ಆಡಳಿತಕ್ಕೆ ಸಜ್ಜಾದ ಸರ್ಕಾರ. ಜಿಲ್ಲಾ ಮತ್ತು ತಾಲೂಕು ಪಂಚಾಯತಿ





ಚುನಾವಣೆ ನಡೆಸದೆ 5 ವರ್ಷ ಕಳೆದಿದೆ. ಗ್ರಾಮ ಪಂಚಾಯತಿ ಚುನಾವಣೆ ನಡೆಸದೆ ಆಡಳಿತಾಧಿಕಾರಿಗಳ ನೇಮಕ ಮಾಡಿದ ಸರ್ಕಾರ, ಮೂರು ಹಂತದ ಪಂಚಾಯತ ಚುನಾವಣೆಗಳನ್ನು ಮುಂದೂಡಿ ಆಡಳಿತಾಧಿಕಾರಿ ನೇಮಿಸಿ, ಮಹಿಳೆಯರಿಗೆ, ಪ.ಜಾತಿ ಮತ್ತು ಪ.ಪಂಗಡ ಹಾಗೂ ಹಿಂದುಳಿದ ವರ್ಗಗಳಿಗೆ ರಾಜಕೀಯ ಅಧಿಕಾರದಿಂದ ದೂರವಿಡುವುದು ಸಾಮಾಜಿಕ ನ್ಯಾಯದ ವಿರೋಧಿ ನಡೆಯಾಗಿದೆ.

ಗ್ರಾ.ಪಂ.ಗಳಿಗೆ ಬರಬೇಕಾದ 15ನೇ ಹಣಕಾಸು ರಾಜ್ಯದ ಪಾಲು 2,100 ಕೋಟಿಯಲ್ಲಿ ನಯಾ ಪೈಸೆಯೂ ಸಹ ಬಿಡುಗಡೆಯಾಗಿಲ್ಲ. ನರೇಗಾ ಯೋಜನೆ ಅಡಿಯಲ್ಲಿ ನಿಯಮಾನುಸಾರ ಮಾಡಿದ ಕಾಮಗಾ–ರಿಗಳಿಗೆ ಎರಡು ವರ್ಷಗಳಿಂದ ಸಾಮಗ್ರಿ ಮೊತ್ತ ಬಿಡುಗಡೆ ಆಗಿಲ್ಲ ಇದಕ್ಕೆಲ್ಲ ಹೊಣೆಯಾರು ಎಂದು ತೀವ್ರವಾಗಿ ಖಂಡಿಸಿದರು. ಈ ವೇಳೆ: ರವಿಗೌಡ ಮಲ್ಲದಗುಡ್ಡ, ಲಕ್ಷ್ಮಿ ಬುಡ್ಡಪ್ಪ, ಗಂಗಮ್ಮ ಈರಪ್ಪ, ಸಿದ್ದಪ್ಪ ಬೇವಿನಗಿಡ, ಬಸವರಾಜ ಕವಳೆಕಾಯಿ, ಶಾಮೀಲಪ್ಪ, ಪಂಪಯ್ಯಸ್ವಾಮಿ, ಮಲ್ಲರೆಡ್ಡಿ, ದುರುಗಪ್ಪ, ಹನುಮಂತ, ಸೇರಿದಂತೆ ಗ್ರಾಮಸ್ಥರು ಇದ್ದರು.

# ದಕ್ಷಿಣ ಮಧ್ಯ ರೈಲ್ವೆ ಪುನರ್‌ವ್ಯವಸ್ಥೆ: ಹೊಸ ದಕ್ಷಿಣ ಕರಾವಳಿ ರೈಲ್ವೆ ವಲಯ ರಚನೆ

**ನೈಜ್ಯ ದೆಸೆ ನ್ಯೂಸ್**

**ರಾಯಚೂರು: ರೈಲ್ವೆ ಆಡಳಿತ ವ್ಯವಸ್ಥೆಯನ್ನು ಮತ್ತಷ್ಟು ಪರಿಣಾಮಕಾರಿಯಾಗಿ ರೂಪಿಸುವ ಉದ್ದೇಶದಿಂದ ದಕ್ಷಿಣ ಮಧ್ಯ ರೈಲ್ವೆಯನ್ನು ಪುನರ್‌ವ್ಯವಸ್ಥೆಗೊಳಿಸಿ ಹೊಸದಾಗಿ ದಕ್ಷಿಣ ಕರಾವಳಿ ರೈಲ್ವೆ (SCoR) ವಲಯವನ್ನು ರಚಿಸಲು ಕೇಂದ್ರ ಸರ್ಕಾರ ತೀರ್ಮಾನಿಸಿದೆ. ಈ ಮಹತ್ವದ ಪುನರ್‌ವ್ಯವಸ್ಥೆ 2026ರ ಏಪ್ರಿಲ್ 1ರಿಂದ ಜಾರಿಗೆ ಬರಲಿದ್ದು, ಈ ಕುರಿತು ಡಾ. ಬಾಬು ರಾವ್, ಮಾಜಿ ಸದಸ್ಯರು ಚಖಗಅಅ, ದಕ್ಷಿಣ ಮಧ್ಯ ರೈಲ್ವೆ ಅವರು ಪತ್ರಿಕೆ ಪ್ರಕಟಣೆಯ ಮೂಲಕ ಮಾಹಿತಿ ನೀಡಿದ್ದಾರೆ.**



ಪ್ರಸ್ತುತ ದಕ್ಷಿಣ ಮಧ್ಯ ರೈಲ್ವೆ (SCR)ಯ ಮುಖ್ಯ ಕಚೇರಿ ಸೆಕೆಂದರಾಬಾದ್ ನಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸೆಕೆಂದರಾಬಾದ್, ಹೈದರಾಬಾದ್ ಹಾಗೂ ನಾಂದೇಡ್ ವಿಭಾಗಗಳು ಇದರ ಆಡಳಿತ ವ್ಯಾಪ್ತಿಯಲ್ಲಿವೆ. ಈ ವಲಯವು ತೆಲಂಗಾಣ, ಮಹಾರಾಷ್ಟ್ರ ಹಾಗೂ ಕರ್ನಾಟಕದ ಕೆಲವು ಭಾಗಗಳಿಗೆ ಪ್ರಮುಖ ರೈಲ್ವೆ ಸಂಪರ್ಕ ಒದಗಿಸುತ್ತಿದೆ. ಪುನರ್‌ವ್ಯವಸ್ಥೆಯ ನಂತರ ಹೊಸದಾಗಿ ಸ್ಥಾಪನೆಯಾಗುವ ದಕ್ಷಿಣ ಕರಾವಳಿ ರೈಲ್ವೆ (SCoR) ವಲಯದ ಮುಖ್ಯ ಕಚೇರಿ ವಿಶಾಖಪಟ್ಟಣಂನಲ್ಲಿ ಕಾರ್ಯನಿರ್ವಹಿಸಲಿದ್ದು, ವಿಜಯವಾಡ, ಗುಂಟೂರು, ಗುಂಟಕಲ್ ಹಾಗೂ ವಿಶಾಖಪಟ್ಟ–ಣಂ (ಹೊಸ ಮುಖ್ಯ ಕಚೇರಿ ವಿಭಾಗ) ವಿಭಾಗಗಳು ಇದರ ಅಡಿಯಲ್ಲಿ ಬರಲಿವೆ. ಇದರಿಂದ ಆಂಧ್ರಪ್ರದೇಶ ಹಾಗೂ ಕರಾವಳಿ ಪ್ರದೇಶಗಳ ರೈಲ್ವೆ ಆಡಳಿತಕ್ಕೆ ಹೊಸ ಚೈತನ್ಯ ದೊರಕಲಿದೆ. ಈ ಪುನರ್‌ವ್ಯವಸ್ಥೆಯ ಭಾಗವಾಗಿ ಪ್ರಮುಖ ಮಾರ್ಗಗಳ ವಿಭಾಗೀಯ ಬದಲಾವಣೆಗಳನ್ನೂ ಕೈಗೊಳ್ಳಲಾಗುತ್ತಿದ್ದು,ಈ ಬದಲಾವಣೆಗಳಿಂದ ರೈಲ್ವೆ ಆಡಳಿತ ವ್ಯವಸ್ಥೆ ಇನ್ನಷ್ಟು ಸರಳ ಮತ್ತು ಪರಿಣಾಮಕಾರಿಯಾಗಲಿದ್ದು, ನಿರ್ವಹಣಾ ವೆಚ್ಚ ಕಡಿಮೆಯಾಗುವ ಜೊತೆಗೆ ಪ್ರಯಾಣಿಕರಿಗೆ ವೇಗವಾದ, ಗುಣಮಟ್ಟದ ಸೇವೆ ಲಭ್ಯವಾಗಲಿದೆ. ಅಲ್ಲದೆ, ಮೂಲಸೌಕರ್ಯ ಅಭಿವೃದ್ಧಿ, ಹೊಸ ರೈಲು ಸಂಚಾರ, ಸಮಯಪಾಲನೆ ಹಾಗೂ ಸುರಕ್ಷತಾ ಕ್ರಮಗಳ ಬಲವರ್ಧನೆಗೆ ಸಹಕಾ–ರಿಯಾಗಲಿದೆ ಎಂದು ಡಾ. ಬಾಬು ರಾವ್ ಅವರು ತಮ್ಮ ಪ್ರಕಟಣೆಯಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ರಾಯಚೂರು ವಾಡಿ (108 ಕಿಮೀ) ಮಾರ್ಗವನ್ನು ಸೆಕೆಂದರಾಬಾದ್ ವಿಭಾಗಕ್ಕೆ ವರ್ಗಾಯಿಸಲಾಗುತ್ತದೆ. ವಿಕಾರಾಬಾದ್?ಪರಳಿ (142 ಕಿಮೀ) ಮಾರ್ಗವೂ ಸೆಕೆಂದರಾಬಾದ್ ವಿಭಾಗದ ವ್ಯಾಪ್ತಿಗೆ ಸೇರಲಿದೆ. ಮೋಟುಮರಿ ಕೊಂಡಪಳ್ಳಿ (46 ಕಿಮೀ) ಮಾರ್ಗವನ್ನು ವಿಜಯವಾಡ ವಿಭಾಗಕ್ಕೆ ಒಳಪಡಿಸಲಾಗುತ್ತದೆ.

# ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳಿಗೆ ಪರೀಕ್ಷಾ ವಸ್ತು ವಿತರಣೆ

**ನೈಜ್ಯ ದೆಸೆ ನ್ಯೂಸ್**

**ತಾಳಿಕೋಟಿ:ತಾಲೂಕಿನ ಬ.ಸಾಲವಾಡಗಿ ಸರ್ಕಾರಿ ಪ್ರೌಢಶಾಲೆ ಶಾಲೆಯ ಹಳೆಯ ವಿದ್ಯಾರ್ಥಿಗಳು ತಾವು ಕಲಿತಿರುವ ಶಾಲೆಗೆ ಬಂದು 10ನೇ ತರಗತಿ ವಿದ್ಯಾರ್ಥಿಗಳಿಗೆ ಬೋರ್ಡ್ ಪರೀಕ್ಷೆ ಸಮೀಪ ಬಂದ ಕಾರಣ ಪ್ರತಿಯೊಬ್ಬ ವಿದ್ಯಾರ್ಥಿ & ವಿದ್ಯಾರ್ಥಿನಿಯರಿಗೆ ಪರೀಕ್ಷೆ ಬರೆಯುವ ಪ್ಯಾಡ್ & 1 ಪೆನ್ನನ್ನು ವಿತರಣೆ ಮಾಡಿದರು.**

ಈ ಸಂದರ್ಭದಲ್ಲಿ ಮುಖ್ಯೋಪಾಧ್ಯಾಯನಿ ಸುಮಂಗಲಾ ಕೋಳೂರು ಅವರು ಎಸ್ ಎಸ್ ಎಲ್ ಸಿ ಪರೀಕ್ಷಾ ಸಿದ್ಧತೆಗಳ ಕುರಿತು ವಿದ್ಯಾರ್ಥಿಗಳಿಗೆ



ಸಮಗ್ರ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಎಸ್ ಡಿ ಎಂ ಸಿ ಅಧ್ಯಕ್ಷ ಸಾಹೇಬಗೌಡ ಅನಂತ ರೆಡ್ಡಿ, ಸದಸ್ಯ ಭೀಮನಗೌಡ ಅನಂತರೆಡ್ಡಿ ಹಾಗೂ ಎಲ್ಲ ಗುರುಬಳಗ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಹಳೆ ವಿದ್ಯಾರ್ಥಿಗಳ ಬಳಗದಿಂದ ಬ.ಸಾಲವಾಡಗಿ ಸರ್ಕಾರಿ ಪ್ರೌಢಶಾಲೆಯ 10ನೇ ತರಗತಿ ಮಕ್ಕಳು ಉತ್ತಮ ರೀತಿಯಲ್ಲಿ ಅಂಕವನ್ನು ಪಡೆಯಲಿ ಎಂದು ಶುಭವನ್ನು ಹಾರೈಸಿ, ನಾಡು ನುಡಿಯ ಕುರಿತು ಕಾಳಜಿಯನ್ನು ವ್ಯಕ್ತಪಡಿಸಿದರು.

ಪೆನ್ ಮತ್ತು ಪ್ಯಾಡ್ ನೀಡಿ ಶುಭ ಹಾರೈಸಿರುವ ರುವ ಎಲ್ಲ ಹಳೆಯ ವಿದ್ಯಾರ್ಥಿಗಳಿಗೆ ಶಾಲೆಯ ಪರವಾಗಿ ಎಸ್ ಡಿ ಎಂ ಸಿ ಅಧ್ಯಕ್ಷರು ಧನ್ಯವಾದಗಳನ್ನು ತಿಳಿಸಿದರು. ಈ ಸಮಯದಲ್ಲಿ ತಿಮ್ಮಾರೆಡ್ಡಿ, ಆಕಾಶ ಗೋಡೆಕರ್, ಸಂಗಮೇಶ ಮಾಶಾಳ, ಸಂತೋಷ ಹೊಳೆಪ್ಪಗೋಳ, ಹಣಮಂತ್ರಾಯ ಹೂಗಾರ, ವಿಕಾಸ್ ಕೋಳೂರ, ಕುಪೇಂದ್ರ, ಫೈಸಲ್ ನಂದೀಶ ವಾಲಿಕಾರ ಮತ್ತಿತರರು ಇದ್ದರು.

# ಮುದಗಲ್‌ನಲ್ಲಿ ಅಂಜುಮನ್–ಎ–ಮುಸ್ಲಿಮೀ ನ್ ಸಭೆ: ನೂತನ ಪದಾಧಿಕಾರಿಗಳ ಆಯ್ಕೆ



**ನೈಜ್ಯ ದೆಸೆ ನ್ಯೂಸ್**

**ಮುದಗಲ್: ಅಂಜುಮನ್–ಎ–ಮುಸ್ಲಿಮೀನ್ ಲಿಂಗಸೂಗೂರು ತಾಲೂಕು ಕಮಿಟಿವತಿಯಿಂದ ಮುದಗಲ್ ಪಟ್ಟಣದಲ್ಲಿ ಮಹತ್ವದ ಸಭೆ ನಡೆಯಿತು. ಈ ಸಭೆಯಲ್ಲಿ ಅಂಜುಮನ್–ಎ–ಮುಸ್ಲಿಮೀನ್ ಮುದಗಲ್ ವಿಭಾಗದ ನೂತನ ಕಮಿಟಿಯನ್ನು ಸಮುದಾಯದವರ ಒಮ್ಮತದ ಅಭಿಪ್ರಾಯದ ಮೇರೆಗೆ ಆಯ್ಕೆ ಮಾಡಲಾಯಿತು.**

ಸಭೆಯಲ್ಲಿ ಮುದಗಲ್ ವಿಭಾಗದ ಕಮಿಟಿಯ ಅಧ್ಯಕ್ಷರಾಗಿ ಮಹ್ಮದ್ ರಸೂಲ್, ಉಪಾಧ್ಯಕ್ಷರಾಗಿ ಅರ್ಬಾಜ್ ಖಾನ್, ಪ್ರಧಾನ ಕಾರ್ಯದರ್ಶಿಯಾಗಿ ಅಸ್ಲಾಂ ಡೊಯಿ, ಖಜಾಂಚಿಯಾಗಿ ಆರಿಫ್ ಡೊಯಿ, ಕಾರ್ಯದರ್ಶಿಯಾಗಿ ಹುಸೇನ್ ಭಾಷಾ, ಜಂಟಿ ಕಾರ್ಯದರ್ಶಿಯಾಗಿ ಯಾಸೀನ್ ಪಾನ್ ವಾಲೆ, ಸಹ ಕಾರ್ಯದರ್ಶಿಯಾಗಿ ಅಬ್ರಾರ್ ಅವರನ್ನು ಆಯ್ಕೆ ಮಾಡಲಾಯಿತು. ಇದಲ್ಲದೆ ಸದಸ್ಯರಾಗಿ ಮೈಬೂಬ್, ಶಾಹೀದ್, ರಾಜ್ ಮಹ್ಮದ್, ಖಾಸಿಂ ಅಲಿ ಡೊಂಗ್ರಿ ಹಾಗೂ ಭಾಷಾ ಆನೆಹೊಸೂರ ಅವರನ್ನು ಆಯ್ಕೆ ಮಾಡಲಾಯಿತು.

ಅದೇ ಸಂದರ್ಭದಲ್ಲಿ ಅಂಜುಮನ್–ಎ–ಮುಸ್ಲಿಮೀನ್ ಲಿಂಗಸೂಗೂರು ತಾಲೂಕು ಕಮಿಟಿಗೆ ಮುದಗಲ್ ವಿಭಾಗದಿಂದ ಜನಾಬ್ ರಹೀಮ್ ಶಾ ಮಕಾನದಾರ್, ಜನಾಬ್ ಮೋಹಿನುದ್ದಿನ್ ಭಂಡಾರಿ ಸಾಬ್, ಜನಾಬ್ ಅಬ್ದುಲ್ ಹಮೀದ್ ಹಾಗೂ ಜನಾಬ್ ಮೀರು ಹುಸೇನ್ ಮಕಾನದಾರ್ ಅವರನ್ನು ಕಾರ್ಯಕಾರಿ ಸಮಿತಿ ಸದಸ್ಯರಾಗಿ ಆಯ್ಕೆ ಮಾಡಲಾಯಿತು. ಈ ಸಭೆಯಲ್ಲಿ ಅಂಜುಮನ್ ಲಿಂಗಸೂಗೂರು ತಾಲೂಕು ಕಮಿಟಿಯ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಮುದಗಲ್ ಪಟ್ಟಣದ ಸಮುದಾಯದ ಗುರುಹಿರಿಯರು ಮತ್ತು ಸಹೋದರರು ಉಪಸ್ಥಿತರಿದ್ದು, ನೂತನ ಪದಾಧಿಕಾ–ರಿಗಳಿಗೆ ಶುಭಾಶಯಗಳನ್ನು ತಿಳಿಸಿದರು.

# ಯಶಸ್ವಿನಿ ಆರೋಗ್ಯ ಯೋಜನೆಯ ಮಹತ್ವ ಕುರಿತು ತರಬೇತಿ

**ನೈಜ್ಯ ದೆಸೆ ನ್ಯೂಸ್**

**ಮಸ್ಕಿ: ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ರಾಯಚೂರು ಜಿಲ್ಲಾ ಸಹಕಾರ ಒಕ್ಕೂಟ, ರಾಯಚೂರು ಬಳ್ಳಾರಿ ಕೊಪ್ಪಳ ಹಾಗೂ ವಿಜಯನಗರ ಜಿಲ್ಲಾ ಸಹಕಾರ ಹಾಲು ಒಕ್ಕೂಟ (ಕೆ,ಎಂ,ಎಫ್), ಸಹಕಾರ ಇಲಾಖೆ, ಯಶಸ್ವಿನಿ ಟ್ರಸ್ಟ್, ಸಿಂಧನೂರು ಉಪವಿಭಾಗದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಹಾಗೂ ಇತರ ವಿವಿಧ ಸಹಕಾರ ಸಂಘಗಳ ಸಂಯುಕ್ತ ಆಶ್ರಯದಲ್ಲಿ "ಸಿಂಧನೂರು ಉಪವಿಭಾಗದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಇತರೆ ವಿವಿಧ ಸಹಕಾರ ಸಂಘಗಳ ಮುಖ್ಯಕಾರ್ಯನಿರ್ವಹಣಾಧಿಕಾರಿ ಮತ್ತು ಕಾರ್ಯದರ್ಶಿಗಳಿಗೆ ಯಶಸ್ವಿನಿ ಆರೋಗ್ಯ ಯೋಜನೆ ಕುರಿತು ಒಂದು ದಿನದ ಜಿಲ್ಲಾ ಮಟ್ಟದ ವಿಶೇಷ ಕಾರ್ಯಕ್ರಮ"ವನ್ನು ಪಟ್ಟಣದ ಗಚ್ಚಿನ ಮಠ, ಕೇಂದ್ರ ಶಾಲೆ ಹತ್ತಿರ, ಮಸ್ಕಿಯಲ್ಲಿ ಜರುಗಿಸಲಾಯಿತು.**

ಕಾರ್ಯಕ್ರಮದ ಉದ್ಘಾಟನೆಯನ್ನು ನಾಗಭೂಷಣ ಬಾರಕೇರ್ ಅಧ್ಯಕ್ಷರು ಪ್ರಾಥ–ಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಮಸ್ಕಿ



ಇವರು ನೆರವೇರಿಸಿ ಶುಭ ಕೋರಿ ಮಾತನಾಡಿ ಸಂಘಗಳ ಮುಖ್ಯಕಾರ್ಯನಿರ್ವಹಣಾಧಿಕಾರಿ ಹಾಗೂ ಕಾರ್ಯದರ್ಶಿಗಳು ಜವಾಬ್ದಾರಿಯಿಂದ ಯಶಸ್ವಿನಿ ಫಲಾನುಭವಿಗಳ ಆನ್ ಲೈನ್ ನೋಂದಣಿ ಕಾರ್ಯವನ್ನು ಮಾಡುವಂತೆ ತಿಳಿಸಿ ಜಿಲ್ಲಾ ಸಹಕಾರ ಒಕ್ಕೂಟದಿಂದ ಜರುಗಿಸುವ ಇಂಥ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತರಬೇತಿಯ ಪ್ರಯೋಜನ ಪಡೆಯುವಂತೆ ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಚಂದ್ರಶೇಖರ್ ಗೂಗೇಬಾಳ ನಿರ್ದೇಶಕರು ರಾಯಚೂರು ಜಿಲ್ಲಾ ಸಹಕಾರ ಒಕ್ಕೂಟ ಇವರು ಮಾತನಾಡಿ ಜಿಲ್ಲಾ ಸಹಕಾರ ಒಕ್ಕೂಟದಿಂದ ಜರುಗುವ ವಿವಿಧ ತರಬೇತಿಗಳ ಕಾರ್ಯಕ್ರಮಗಳ ಬಗ್ಗೆ ತಿಳಿಸಿ, ತರಬೇತಿಯಲ್ಲಿ ಭಾಗವಹಿಸಿ, ನೀಡುವ ಮಾಹಿತಿಯನ್ನು ತಮ್ಮ ಸಂಘದಲ್ಲಿ ಅಳವಡಿಸಿಕೊಳ್ಳುವಂತೆ ಸಲಹೆ ನೀಡಿದರು.

ಅತಿಥಿ ಉಪನ್ಯಾಸಕರಾದ ಪ್ರವೀಣಕುಮಾರ ಸಮನ್ವಯಾಧಿಕಾರಿಗಳು ಯಶಸ್ವಿನಿ ಟ್ರಸ್ಟ್ ಅವರು ಯಶಸ್ವಿನಿ ಆರೋಗ್ಯ ಯೋಜನೆಯ ನೋಂದಣಿ, ಯೋಜನೆಯ ಮಹತ್ವ ಮತ್ತು ಯೋಜನೆಯಡಿ ದೊರೆಯುವ ವಿಶೇಷ ಸೌಲಭ್ಯಗಳು ಮತ್ತು ಆನ್ ಲೈನ್ ಎಂಟ್ರಿ ಕುರಿತು ಮಾಹಿತಿ ನೀಡಿದರು. ಇನ್ನೋರ್ವ ಉಪನ್ಯಾಸಕರಾದ ವೀರೇಶ್ ಹಿರೇಮಠ ಮುಖ್ಯಕಾರ್ಯನಿರ್ವಹಣಾಧಿಕಾರಿ ಬ್ರಮರಾಂಭ ಪತ್ತಿನ ಸೌಹಾರ್ದ ಸಹಕಾರ ಸಂಘ ಮಸ್ಕಿ ಇವರು ಸೈಬರ್ ಅಪರಾಧಗಳು, ನಿಯಂತ್ರಣ ಮತ್ತು ಮುನ್ನೆಚ್ಚರಿಕೆ ಕ್ರಮಗಳ ಕುರಿತು ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಘನಮಠದಯ್ಯ ಸಲಹೆಗಾರರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಜಿಲ್ಲಾ ಒಕ್ಕೂಟ ಇವರು ಸಹಕಾರ ಪಿತಾಮಹ ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿದರು.

ಮುಖ್ಯತಿಥಿಗಳಾಗಿ, ಎಂ. ಸತ್ಯನಾರಾಯಣ ಪ್ರಭಾರ ವ್ಯವಸ್ಥಾಫಕರು ಕೆ.ಎಫ್. ಸಿಂಧನೂರು, ಗಂಗಾಧರ ಸಿ.ಡಿ.ಒ. ಲಿಂಗಸೂಗೂರು, ಮುದಸಿರ್ ಸಿ.ಡಿ.ಒ. ಮಸ್ಕಿ, ಹೀರೋಜಿ ಸಿ.ಡಿ.ಒ. ಸಿಂಧನೂರು, ನಾಗಪ್ಪ ವಿಸ್ತೀರ್ಣಾಧಿಕಾರಿ ಕೆ.ಎಂ.ಎಫ್. ಲಿಂಗಸೂಗೂರು, ಶಿವರಾಜ್ ನೀರೀಕ್ಷಕರು, ಎ.ಆರ್.ಸಿ.ಎಸ್. ಕಛೇರಿ ಸಿಂಧನೂರು ಹಾಗೂ ಮಂಜುನಾಥ ಜಿ. ವ್ಯವಸ್ಥಾಪಕರು ಬಿ.ಎಂ.ಸಿ. ಕೇಂದ್ರ ಮುದಗಲ್ ಮುಂತಾದವರು ಉಪಸ್ಥಿತರಿದ್ದರು. ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಜಿಲ್ಲಾ ಸಹಕಾರ ಒಕ್ಕೂಟದ ಜಿಲ್ಲಾ ಸಹಕಾರ ಶಿಕ್ಷಕರಾದ ಮಂಜುಳಾ ಸ್ವಾಗತಿಸಿದರು. ಒಕ್ಕೂಟದ ಮುಖ್ಯಕಾರ್ಯನಿರ್ವಹಣಾಧಿಕಾರಿ ಗಾಯತ್ರಿ ವೈ. ಪ್ರಾಸ್ಥಾವಿಕವಾಗಿ ಮಾತನಾಡಿದರು. ಜಿಲ್ಲಾ ಸಹಕಾರ ಶಿಕ್ಷಕರಾದ ಕು॥ ಅಶ್ವಿನಿ ಕೆ. ನಿರೂಪಿಸಿದರೆ ಒಕ್ಕೂಟದ ವ್ಯವಸ್ಥಾಪಕ ಮಲ್ಲಿಕಾರ್ಜುನ ಎಂ. ಅಮ್ಮಿನಭಾವಿ ವಂದಿಸಿದರು. ಕಾರ್ಯಕ್ರಮದಲ್ಲಿ ಸಿಂಧನೂರು ಉಪವಿಭಾಗದ (ಸಿಂಧನೂರು, ಲಿಂಗಸಗೂರು ಹಾಗೂ ಮಸ್ಕಿ ತಾಲೂಕುಗಳ) ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಎಲ್ಲಾ ವಿವಿಧ ಸಹಕಾರ ಸಂಘಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಕಾರ್ಯದರ್ಶಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ


### M.V.Sc. Animal Nutrition

MVSc (Master of Veterinary Science) in Animal Nutrition ಎಂಬುದು 2 ವರ್ಷಗಳ ಸ್ನಾತಕೋತ್ತರ ಕೋರ್ಸ್ ಆಗಿದೆ. ಪ್ರಾಣಿಪಾಲನೆ ಮತ್ತು ಪಶುವೈದ್ಯಕೀಯ ವಿಜ್ಞಾನ ಕ್ಷೇತ್ರದಲ್ಲಿ M.V.Sc. Animal Nutrition (ಮಾಸ್ಟರ್ ಆಫ್ ವೆಟರಿನರಿ ಸೈನ್ಸ್ ಅನಿಮಲ್ ನ್ಯೂಟ್ರಿಷನ್) ಮಹತ್ವದ ಮೂಲಸ್ತಂಭವಾಗಿ ಪರಿಣಮಿಸಿದೆ. ಈ ಶಾಖೆಯು ವಿವಿಧ ಪ್ರಾಣಿಗಳ ಪೋಷಕಾಂಶ ಅವಶ್ಯಕತೆಗಳು, ಆಹಾರ ಪದ್ಧತಿಗಳು ಹಾಗೂ ಆಹಾರ ನಿರ್ವಹಣೆಯ ಅಧ್ಯಯನವನ್ನು ಒಳಗೊಂಡಿದೆ. ಮುಖ್ಯವಾಗಿ ಹಾಲು ಹಾಗೂ ಮಾಂಸ ಉತ್ಪಾದನೆ ಮಾಡುವ ಪಶುಗಳು ಮತ್ತು ಸಾಕುಪ್ರಾಣಿಗಳ ಪೋಷಣೆಯ ಮೇಲೆ ಇದು ಗಮನ ಹರಿಸುತ್ತದೆ. ಪ್ರಾಣಿ ಪೋಷಣೆ (Animal Nutrition) ಪ್ರಾಣಿಗಳ ಆರೋಗ್ಯ ಮತ್ತು ಕಲ್ಯಾಣವನ್ನು ಖಚಿತಪಡಿಸುವುದರಲ್ಲಿ ಅತ್ಯಂತ ಪ್ರಮುಖ ಪಾತ್ರವಹಿಸುತ್ತದೆ. ಜೊತೆಗೆ, ಉತ್ಪಾದಕತೆಯನ್ನು ಹೆಚ್ಚಿಸಲು, ರೋಗನಿರೋಧಕ ಶಕ್ತಿಯನ್ನು ಬಲಪಡಿಸಲು ಮತ್ತು ಸಮತೋಲನಯುತ ಬೆಳವಣಿಗೆ ಸಾಧಿಸಲು ಇದು ಸಹಕಾರಿ ಆಗುತ್ತದೆ. ಈ ಲೇಖನದಲ್ಲಿ M.V.Sc. Animal Nutrition ಕ್ಷೇತ್ರದ ಮಹತ್ವ, ಅದರ ಮೂಲಭೂತ ತತ್ವಗಳು ಮತ್ತು ಈ ಆಕರ್ಷಕ ಹಾಗೂ ವಿಜ್ಞಾನಾಧಾರಿತ ಕ್ಷೇತ್ರವನ್ನು ರೂಪಿಸುವ ವಿವಿಧ ಆಯಾಮಗಳನ್ನು ನಾವು ಪರಿಶೀಲಿಸುತ್ತೇವೆ.ಇದು ಪ್ರಾಣಿಗಳ ಪೋಷಣೆ, ಪೌಷ್ಟಿಕಾಂಶದ ಅವಶ್ಯಕತೆಗಳು, ಆಹಾರ ಸಂಯೋಜನೆ ಮತ್ತು ಚಯಾಪಚಯ ಕ್ರಿಯೆಯ ಬಗ್ಗೆ ವಿವರವಾದ ಅಧ್ಯಯನವನ್ನು ಒದಗಿಸುತ್ತದೆ. ಈ ಕೋರ್ಸ್‌ನ ಉದ್ದೇಶವು ಪಶು ಆಹಾರ ಉತ್ಪಾದನೆ, ಸಂಶೋಧನೆ ಮತ್ತು ಪ್ರಾಣಿಗಳ ಆರೋಗ್ಯ ಕ್ಷೇತ್ರದಲ್ಲಿ ತಜ್ಞರನ್ನು ಸಿದ್ಧಪಡಿಸುವುದಾಗಿದೆ. ಕೋರ್ಸ್ ವಿವರಗಳು (MVSc Animal Nutrition Details): ಕೋರ್ಸ್ ಅವಧಿ: 2 ವರ್ಷಗಳು (4 ಸೆಮಿಸ್ಟರ್‌ಗಳು). ಅರ್ಹತೆ (Eligibility): ವಿಶ್ವವಿದ್ಯಾಲಯದಿಂದ B.V.Sc & A.H. (Bachelor of Veterinary Science and Animal Husbandry) ಪದವಿ. ಪ್ರವೇಶಾತಿ (Admission): ಪ್ರವೇಶ ಪರೀಕ್ಷೆ (KVAFSU, ICAR AIEEA) ಮೂಲಕ ಪ್ರವೇಶ ಪಡೆಯಬಹುದು. ಮುಖ್ಯ ವಿಷಯಗಳು (Key Subjects): ಪೋಷಕಾಂಶಗಳ ಚಯಾಪಚಯ (Nutrient Metabolism). ರೈಮಿನೆಂಟ್ ಮತ್ತು ಮೊನೊಗ್ಯಾಸ್ಟ್ರಿಕ್ ಪೋಷಣೆ (Ruminant and Monogastric Nutrition). ಪಶು ಆಹಾರ ತಂತ್ರಜ್ಞಾನ (Feed Technology). R¤d ಮತ್ತು ವಿಟಮಿನ್ ಪೋಷಣೆ (Mineral and Vitamin Nutrition). ಉದ್ಯೋಗಾವಕಾಶಗಳು (Career Opportunities): ಪಶು ಆಹಾರ ಕಂಪನಿಗಳಲ್ಲಿ ಪೌಷ್ಟಿಕತಜ್ಞರು (Nutritionist in feed industry). ಪಶುವೈದ್ಯಕೀಯ ಕಾಲೇಜುಗಳಲ್ಲಿ ಉಪನ್ಯಾಸಕರು. ಸರ್ಕಾರಿ ಪಶುಸಂಗೋಪನೆ ಇಲಾಖೆಗಳಲ್ಲಿ ಉದ್ಯೋಗ. ಸಂಶೋಧನಾ ಸಂಸ್ಥೆಗಳು (Research Institutes).

## ಮಹರ್ಷಿ ವಾಲ್ಮೀಕಿ ಗುರುಪೀಠದ ಪೀಠಾಧ್ಯಕ್ಷರಾದ ಶ್ರೀ ಪ್ರಸನ್ನಾನಂದ ಪುರಿ ಸ್ವಾಮೀಜಿ ಅವರಿಗೆ ಲಘು ಹೃದಯಾಘಾತ

**ನೈಜ್ಯ ದೆಸೆ ನ್ಯೂಸ್**

**ರಾಜನಹಳ್ಳಿ ಮಹರ್ಷಿ ವಾಲ್ಮೀಕಿ ಗುರುಪೀಠದ ಪೀಠಾಧ್ಯಕ್ಷರಾದ ಶ್ರೀ ಪ್ರಸನ್ನಾನಂದ ಪುರಿ ಸ್ವಾಮೀಜಿ ಅವರಿಗೆ ಲಘು ಹೃದಯಾಘಾತ ಆಗಿದೆ. ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಹೈದರಾಬಾದ್‌ನ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ.**



ವಾಲ್ಮೀಕಿ ಸಮುದಾಯದ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ರಾಯಚೂರು ಜಿಲ್ಲೆಗೆ ಆಗಮಿಸಿದ್ದ ಶ್ರೀಗಳು, ಕಳೆದ ರಾತ್ರಿ ಲಿಂಗಸುಗೂರು ತಾಲೂಕಿನ ಹಟ್ಟಿ ಪಟ್ಟಣದಲ್ಲಿ ವಾಸ್ತವ್ಯ ಹೂಡಿದ್ದರು. ಈ ವೇಳೆ ಅವರಿಗೆ ಏಕಾಏಕಿ ಎದೆನೋವು ಕಾಣಿಸಿಕೊಂಡು ತೀವ್ರ ಅಸ್ವಸ್ಥತೆ ಉಂಟಾಯಿತು. ಕೂಡಲೇ ರಾಯಚೂರು ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಪ್ರಾಥಮಿಕ ಚಿಕಿತ್ಸೆ ನೀಡಲಾಯಿತು. ವೈದ್ಯರ ಸಲಹೆಯಂತೆ, ಹೆಚ್ಚಿನ ಚಿಕಿತ್ಸೆಗಾಗಿ ಶ್ರೀಗಳನ್ನು ರಾಯಚೂರಿನಿಂದ ಹೈದರಾಬಾದ್‌ನ ಅಪೋಲೋ ಆಸ್ಪತ್ರೆಗೆ ಶಿಫ್ಟ್ ಮಾಡಲಾಗಿದೆ.ಸದ್ಯ ಶ್ರೀಗಳು ಹೈದರಾಬಾದ್‌ನಲ್ಲಿ ವೈದ್ಯರ ಮೇಲ್ವಿಚಾರಣೆಯಲ್ಲಿದ್ದು, ಚಿಕಿತ್ಸೆಗೆ ಉತ್ತಮವಾಗಿ ಸ್ಪಂದಿಸುತ್ತಿದ್ದಾರೆ ಎಂದು ಮಠದ ಮೂಲಗಳು ಮತ್ತು ಆಸ್ಪತ್ರೆ ಮೂಲಗಳು ತಿಳಿಸಿವೆ.

# 2025–26ನೇ ಸಾಲಿನ ಕಾಲೇಜು ವಾರ್ಷಿಕೋತ್ಸವ, ಪ್ರತಿಭಾ ಪುರಸ್ಕಾರ ಮತ್ತು ದ್ವಿತೀಯ ಪಿಯು ವಿದ್ಯಾರ್ಥಿನಿಯರಿಗೆ ಬೀಳ್ಕೊಡುಗೆ ಸಮಾರಂಭ

**ನೈಜ್ಯ ದೆಸೆ ನ್ಯೂಸ್**

**ಸರ್ಕಾರದ ಸೌಲಭ್ಯಗಳು ಬಡಜನರು ಮತ್ತು ಬಡ ವಿದ್ಯಾರ್ಥಿಗಳಿಗೆ ದೊರೆತಾಗ ಮಾತ್ರ ಸರ್ಕಾರಗಳು ಜೀವಂತವಾಗಿರುತ್ತವೆ ಇಲ್ಲವಾದರೆ ಸರ್ಕಾರ ಸತ್ತಂತೆ' ಎಂದು ನಗರ ಶಾಸಕ ಡಾ.ಶಿವರಾಜ ಪಾಟೀಲ ಹೇಳಿದರು.**

ನಗರದ ಬಾಲಕಿಯರ ಸರ್ಕಾರಿ ಪದವಿ ಪೂರ್ವಕಾಲೇಜು ಮೈದಾನದಲ್ಲಿ ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ಹಾಗೂ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ವತಿಯಿಂದ 2025–26ನೇ ಸಾಲಿನ ಕಾಲೇಜು ವಾರ್ಷಿಕೋತ್ಸವ, ಪ್ರತಿಭಾ ಪುರಸ್ಕಾರ ಮತ್ತು ದ್ವಿತೀಯ ಪಿಯು ವಿದ್ಯಾರ್ಥಿನಿಯರಿಗೆ ಬೀಳ್ಕೊಡುಗೆ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು. 'ಇಲ್ಲಿಯ ಪ್ರೌಢ ಶಾಲೆ ಹಾಗೂ ಪದವಿ



ಪೂರ್ವ ಕಾಲೇಜಿನಲ್ಲಿ ಖಾಸಗಿ ಶಾಲಾ ಕಾಲೇಜಿನಲ್ಲಿ ಸರಿಸಾಟಿಯಾದ ಸೌಲಭ್ಯಗಳನ್ನು ಒದಗಿಸಲಾಗಿದೆ. ವಿದ್ಯಾರ್ಥಿಗಳು ಸರ್ಕಾರಿ ಸೌಲಭ್ಯಗಳನ್ನು ಪಡೆದು ಉನ್ನತ ಹುದ್ದೆಗಳಿಗೆ ಸೇರಿಕೊಳ್ಳಬೇಕು. ಈ ಮೂಲಕ ಸಮಾಜ ಸೇವೆ ಮಾಡಬೇಕು' ಎಂದು ಸಲಹೆ ನೀಡಿದರು.

ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷ ರವೀಂದ್ರ ಜಲ್ದಾರ್ ಪ್ರಾಸ್ತಾವಿಕವಾಗಿ ಮಾತನಾಡಿ, 'ಕಳೆದ 12 ವರ್ಷಗಳಲ್ಲಿ ಶಾಸಕ ಶಿವರಾಜ ಪಾಟೀಲರ ಶ್ರಮದಿಂದ 34 ಕೊಠಡಿಗಳನ್ನು ಬಾಲಕಿಯರ ಸರ್ಕಾರಿ ಪದವಿ ಪೂರ್ವ ಶಾಲೆ ಮತ್ತು ಕಾಲೇಜಿನಲ್ಲಿ ನಿರ್ಮಾಣ ಮಾಡಲಾಗಿದೆ' ಎಂದು ತಿಳಿಸಿದರು. ಉಪ ನಿರ್ದೇಶಕ ಸೋಮಶೇಖರಪ್ಪ ಹೊಕ್ರಾಣಿಯವರು ಮಾತನಾಡಿದರು. ಕಲಾವಿದರಾದ ರಾಜು, ಉಪನ್ಯಾಸಕರ ಸಂಘದ ಅಧ್ಯಕ್ಷ ನರಸಪ್ಪ ಭಂಡಾರಿ, ಕಾಲೇಜಿನ ಪ್ರಾಚಾರ್ಯ ಡಾ.ಕುಟೆಂಪ್ಪ ಗೌರಿಪುರ, ಪ್ರಮುಖರಾದ ರವೀಂದ್ರ ಬಂಡಿ, ಗೋವರ್ಧನ ರೆಡ್ಡಿ, ಶರಣಪ್ಪ ಪಾಟೀಲ, ವೀರೇಶ ಸೆರೆಗಾರ್, ಪ್ರೌಢಶಾಲೆಯ ಮುಖ್ಯಗುರು ಶ್ರೀನಿವಾಸ ಮರೆಡ್ಡಿ, ಉಪನ್ಯಾಸಕರಾದ ಚನ್ನಬಸಪ್ಪ, ರಾಣಾ, ಅನಿತಾ, ರವಿಕುಮಾರ ಉಪಸ್ಥಿತರಿದ್ದರು.

# ನೀರಮಾನ್ವಿ ಶಿವಾಜಿ ಜಯಂತೋತ್ಸವ ಆಚರಣೆ



**ನೈಜ್ಯ ದೆಸೆ ನ್ಯೂಸ್**

**ಮಾನ್ವಿ: ಛತ್ರಪತಿ ಶಿವಾಜಿ ಯುವ ಸೇನೆ ನೀರಮಾನ್ವಿ ಹಾಗೂ ಗ್ರಾಮದ ಹಿರಿಯರ ಸಂಯುಕ್ತಾಶ್ರಯದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ 396 ನೆಯ ಜಯಂತೋತ್ಸವವನ್ನು ಅತಿ ವಿಜ್ರಂಭಣೆಯಿಂದ ಸರಳವಾಗಿ ಶ್ರೀ ರೇಣುಕಾ ಯಲ್ಲಮ್ಮ ದೇವಿ ಸರ್ಕಲ್ ನಲ್ಲಿ ಊರಿನ ಹಿರಿಯರು ಹಾಗೂ ಗ್ರಾಮ ಘಟಕದ ಅಧ್ಯಕ್ಷ ರವಿ ತಿಮ್ಮಯ್ಯ ನಾಯಕ ಹಾಗೂ ಪದಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು ಈ ಸಂದರ್ಭದಲ್ಲಿ ಗ್ರಾಮದ ಎಲ್ಲಾ ಮುಖಂಡರು:**

ಹಾಜರಿದ್ದು ಶಿವಾಜಿ ಮಹಾರಾಜರ ಆದರ್ಶಗಳನ್ನು ನಿಜ ಜೀವನದಲ್ಲಿ ಅಳವಡಿಸಿಕೊಂಡರೆ ನಾವು ಎಲ್ಲರ ಜೊತೆ ಉತ್ತಮವಾಗಿ ಸಹಬಾಳ್ವೆಯಿಂದ ಇರಬಹುದಾಗಿದೆ ಕಾರಣ ಜಾತಿ ಭೇದವಿಲ್ಲದೆ ಎಲ್ಲರೂ ಒಗ್ಗಟ್ಟಾಗಿರಬೇಕೆಂದರು ಈ ಸಂದರ್ಭದಲ್ಲಿ ಕೇಂದ್ರೀಯ ಶಶಸ್ತ್ರ ಪಡೆಗೆ ಃಖಈ ಗೆ ಆಯ್ಕೆಯಾಗಿರುವ ಜೆಲ್ಲಿ ಶಿವರಾಜ ನಾಗಪ್ಪ ನಾಯಕ ನೀರಮಾನ್ವಿ ಇವರನ್ನು ಈ ಸಂದರ್ಭದಲ್ಲಿ ಗ್ರಾಮಸ್ಥರು ಹಾಗೂ ಯುವ ಸೇನೆ ಬಳಗದಿಂದ ಸನ್ಮಾನಿಸಿ ಗೌರವಿಸಲಾಯಿತು ಈ ಸಂದರ್ಭದಲ್ಲಿ ಎಲ್ಲಾ ಸಮುದಾಯದ ಬಂಧುಗಳು ಪಕ್ಕದ ಗ್ರಾಮಗಳಾದ ಹರವಿ ಬೆಟ್ಟದೂರು ಕಪಗಲ್ ಸುಂಕೇಶ್ವರದ ಸಾದಪುರದ ಯುವಕರು ಹಾಜರಿದ್ದು ಕಾರ್ಯಕ್ರಮ ಯಶಸ್ವಿಗೊಳಿಸಿದರು ನಂತರ ಜಯಂತೋತ್ಸವದ ಅಂಗವಾಗಿ ಬಂದಂತ ಎಲ್ಲಾ ದೇಶಭಕ್ತರಿಗೆ ಸಿಹಿ ಹಂಚಲಾಯಿತು.

# ಬಣಜಿಗ ಸಂಸ್ಥಾಪನಾ ದಿನಾಚರಣೆ

**ನೈಜ್ಯ ದೆಸೆ ನ್ಯೂಸ್**

**ಸಮಾಜ ಸಂಘಟನೆ ಎಂಬುವುದು ಹೂವಿನ ಹಾಸಿಗೆ ಅಲ್ಲ. ಸಮಾಜ ಸಂಘಟನೆಯು ಸುಖ–ದುಃಖಗಳ ಸಮ್ಮಿಲನವಾಗಿದೆ. ಸಂಘಟನೆ ವೇಳೆ ಎಚ್ಚರಿಕೆಯಿಂದ ಇನ್ನೊಂದು ಸಮಾಜದ ಭಾವನೆಗೆ ಧಕ್ಕೆಯಾಗದಂತೆ ಬಣಜಿಗ ಸಮಾಜ ಸಂಘಟಿತವಾಗಿದೆ ಎಂದು ಸಮಾಜದ ರಾಜ್ಯ ಉಪಾಧ್ಯಕ್ಷ ಅಂದಪ್ಪ ಜವಳಿ ಹೇಳಿದರು. ಪಟ್ಟಣದಲ್ಲಿ ಬಣಜಿಗ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.**

.'ಸಮಾಜ ಸಂಘಟನೆ ರಾಜಕೀಯ ರಹಿತ ಸಂಘಟನೆಯಾಗಬೇಕು. ಸಂಘಟನೆ ಮತ್ತೊಂದು ಸಮಾಜದ



ವಿರುದ್ಧ ಸಂಘಟನೆಯಲ್ಲ. ಬಣಜಿಗ ಸಮಾಜದಲ್ಲಿರುವ ಬಡವರಿಗೆ ಸಹಾಯ ಮಾಡುವ ಮೂಲಕ ಅವರು ಆರ್ಥಿಕವಾಗಿ ಸಬಲರಾಗಲು ಸಹಾಯ ಮಾಡುವ ಉದ್ದೇಶ ಒಳಗೊಂಡಿರಬೇಕು' ಎಂದು ತಿಳಿಸಿದರು. ಸಮಾಜದ ಹಿರಿಯ ಮುಖಂಡ ಅಂದಾನಪ್ಪ ಅಂಗಡಿ ಮಾತನಾಡಿ, ಬಣಜಿಗ ಸಮಾಜ ಸಂಘಟನೆ ಇನ್ನೊಂದು ಸಮಾಜದೊಂದಿಗೆ ಪೈಪೋಟಿ ನಡೆಸಲು ಅಲ್ಲವೇ ಅಲ್ಲ. ಲಿಂಗಾಯತ ಸಮಾಜವು ಸೇ–ರಿದಂತೆ ಎಲ್ಲ ಸಮಾಜಗಳನ್ನು ಗೌರವದೊಂದಿಗೆ ನೋಡಿಕೊಂಡು ಸಂಘಟಿತರಾಗಿ ಸರ್ಕಾರ ನೀಡಿರುವ ಮೀಸಲಾತಿಯನ್ನು ಸಮಾಜಕ್ಕೆ ತಲುಪಿಸುವ ಕೆಲಸ ಮಾಡಲಾಗುತ್ತಿದೆ ಎಂದು ಹೇಳಿದರು. ರಾಜ್ಯ ಕಾರ್ಯಕಾರಿಣಿ ಸದಸ್ಯರ ವಿಶ್ವನಾಥ ಮಳಗಿ, ಕಪ್ಪತ್ತಪ್ಪ ಅಂಗಡಿ, ಬಸವರಾಜ್ ಜೋಳದ, ಪ್ರಭು ಹೊಂಬಳ, ಜಂಬಣ್ಣ ಅಂಗಡಿ, ಮಲ್ಲಪ್ಪ ಗುತ್ತಿ, ವಿಜಯಕುಮಾರ ಅಂಗಡಿ, ಮಂಜುನಾಥ ಅಂಗಡಿ, ಜಯಪ್ರಕಾಶ ಹೊಗರಿ, ಪ್ರಕಾಶ ಕುದರಿಮೋತಿ, ಬಸವರಾಜ್ ಪಟ್ಟಣಶೆಟ್ಟಿ, ರವಿಕುಮಾರ್ ನಲ್ವಾಡ್, ಶರಣಪ್ಪ ಗುತ್ತಿ, ಪಂಚಾಕ್ಷರಿ ಯಾಕ್ಲಾಸಾಪುರ, ಈಶಪ್ಪ ಅಂಗಡಿ ಇದ್ದರು.

# ಧರ್ಮ ಮಾರ್ಗದಲ್ಲಿ ನಡೆಯಿರಿ: ಶಿವಲಿಂಗಯ್ಯ ಶರಣರು



**ನೈಜ್ಯ ದೆಸೆ ನ್ಯೂಸ್**

**ತಾಳಿಕೋಟೆ: ಧರ್ಮದಿಂದ ನಡೆವವರ ಜೊತೆ ಭಗವಂತ ನಿಲ್ಲುತ್ತಾನೆ ಧರ್ಮಾತ್ಮರೂ ಕಡಿಮೆಯಿದ್ದರೂ, ಅಧರ್ಮಿಗಳ ಸಂಖ್ಯೆ ಹೆಚ್ಚಿದ್ದರೂ ಕೊನೆಗೆ ಧರ್ಮವೇ ಗೆಲ್ಲುತ್ತದೆ ಎಂಬುದಕ್ಕೆ ಮಹಾಭಾರತ ಸಾಕ್ಷಿಯಾಗಿದೆ ಎಂದು ಪುರಾಣಿಕ ಮಸೂತಿ(ಕೊಲ್ಹಾರ) ಯ ಶಿವಲಿಂಗಯ್ಯ ಶರಣರು ಪುರಾಣಿಕಮಠ ಹೇಳಿದರು.**

ಅವರು ಪಟ್ಟಣದ ಸಾಂಭಪ್ರಭು ಶರಣಮುತ್ಯಾರವರ ದೇವಸ್ಥಾನದ ಆವರಣದಲ್ಲಿ ಇದೇ ಮಾ.08 ರಂದು ಜರುಗಲಿರುವ ಸಾಂಭಪ್ರಭು ಶರಣಮುತ್ಯಾರವರ ಜಾತ್ರಾ ಮಹೋತ್ಸವದ ಅಂಗವಾಗಿ ಪ್ರಾರಂಭಗೊಂಡ ಮುಗಳಖೋಡ ಯಲ್ಲಾಲಿಂಗ ಮಹಾರಾಜರ ಮಹಾಪುರಾಣ ಪ್ರಾರಂಭೋತ್ಸವದಲ್ಲಿ ಪುರಾಣ–ಕ್ಕೆ ಚಾಲನೆ ನೀಡಿ ಬುಧವಾರ ಮಾತನಾಡಿದರು. ಅತಿಥಿಗಳಾಗಿದ್ದ ಯಾದಗಿರಿ ಜಿಲ್ಲಾ ಪಂಚಾಯ್ತಿ ಮಾಜಿ ಅಧ್ಯಕ್ಷ ಬಸನಗೌಡ ಪಾಟೀಲ ಯಡಿಯಾಪುರ, ಭಕ್ತಿಯಿದ್ದಲ್ಲಿ ಶಕ್ತಿಯಿರುತ್ತದೆ. ಇಂಜಿನಿಯರಿಂಗ ಮುಗಿಸಿ ಇಂಜಿನಿಯರ್ ಹುದ್ದೆ ಸಿಗುವಂತೆ ಮಾಡೆಂದು ವರಕೇಳಲು ಹೋದ ನನಗೆ ಮುಗಳಕೋಡ ಅಜ್ಜನವರು ನೌಕರಿ ಆಸೆ ಬಿಡಿಸಿ ತೋರಿದ ಹಾದಿಯಲ್ಲಿ ನಡೆದು ಇಂದು ಜಿ.ಪಂ ಅಧ್ಯಕ್ಷ ಗದ್ದುಗೆಯೇರುವಂತಾಯಿತು. ಎಂದರು.

ಎಸ್.ಕೆ.ಕಾಲೇಜಿನ ನಿವೃತ್ತ ಪ್ರಾಚಾರ್ಯ ಆರ್.ಎನ್.ಪಾಟೀಲ,ಮನುಷ್ಯರ ಬಳಿ ಅಳಿಯದಂತಹ ಅಪಾರ ಬೋಗ–ಭಾಗ್ಯ ಸಂಪತ್ತಿದ್ದರೂ ಭಗವಂತನ ಬಗೆಗೆ ಜ್ಞಾನ, ಚಿಂತನೆ ಇಲ್ಲದಿದ್ದರೆ ಅದು ಹೆಣ–ಕ್ಕೆ ಸಮಾನ ಎಂದು ಅನುಭಾವಿಗಳು ಹೇಳಿದ್ದಾರೆ. ಆದ್ದರಿಂದ ಶರಣರು–ಸಂತರು ಮಾರ್ಗದಲ್ಲಿ ನಡೆದು ಬದುಕು ಸಾರ್ತಕಗೊಳಿಸಿಕೊಳ್ಳಬೇಕು ಎಂದರು. ಸಮ್ಮುಖವನ್ನು ವಹಿಸಿದ್ದ ಸ್ಥಳೀಯ ಕೈಲಾಸಪೇಟೆಯ ಬಸವಪ್ರಭು ದೇವರು, ಖಾಸ್ಗತೇಶ್ವರಮಠದ ಆಡಳಿತಾಧಿಕಾರಿ ಮು–ರಿಗೇಶ ವಿರಕ್ತಮಠ ಆಶೀರ್ವಚನ ನೀಡಿದರು.

ವೇದಿಕೆಯಲ್ಲಿ ನೇತೃತ್ವವನ್ನು ವಹಿಸಿದ್ದ ಸಾಂಭಪ್ರಭು ಶರಣರಮಠದ ಬಸಣ್ಣನವರು ಶರಣರು, ಶರಣಪ್ಪನವರು ಶರಣರು ಹಾಗೂ ಕಾಶಿಬಾಯಿ ಅಮ್ಮನವರು ಭಂಟನೂರ, ವಜ್ಜಲ ಶರಣರು, ಐ.ಬಿ.ಪಾಟೀಲ ಮಿಣಜಗಿ ಉಪಸ್ಥಿತ–ರಿದ್ದರು, ಸಂಗೀತಸೇವೆಯನ್ನು ಹುಣಸಗಿಯ ಸಂಗೀತ ಶಿಕ್ಷಕ ಅಶೋಕ ರಾಜನಕೋಳೂರ, ಹಾಗೂ ತಬಲಾ ಸೇವೆಯನ್ನು ಚೋಕಾವಿಯ ಬಸನಗೌಡ ಬಿರಾದಾರ ನೀಡುತ್ತಿದ್ದಾರೆ.

ಶರಣಗೌಡ ಪೊಲೀಸ್ ಪಾಟೀಲ ಕರಿಭಾವಿ ಸ್ವಾಗತಿಸಿದರು. ವಿಜಯಪುರ ಮಹಿಳಾ ವಿ.ವಿ.ನ ವಿಜಯಕುಮಾರ ಎಸ್.ಹಿರೇಮಠ ನಿರ್ವಹಿಸಿದರು. ಸಂಗಮೇಶ ಶರಣರ ವಂದಿಸಿದರು. ಸಿದ್ದನಗೌಡ ಪೊಲೀಸ್ ಪಾಟೀಲ, ಬಿ.ಕೆ.ಬಿರಾದಾರ, ಮಲ್ಲಣ್ಣ ಶರಣರ, ಕಾಶಿರಾಯ ದೇಸಾಯಿ ಸಿದ್ದಣ್ಣ ಶರಣ–ರ ಅಸಂಖ್ಯಾತ ಭಕ್ತಾದಿಗಳು ಉಪಸ್ಥಿತರಿದ್ದರು. ಶರ್ಮುದ್ದಿನ್ ನದಾಫ ಭಕ್ತಾದಿಗಳಿಗೆ ನುಚ್ಚು–ಮಜ್ಜಿಗೆ–ಹುಣಸಿಹಿಂಡಿ .ಪ್ರಸಾದ ಸೇವೆ ಅರ್ಪಿಸಿದರು.

# ಹೆರಿಗೆಯ ನಂತರ ಎರಡನೇಯ ಮಗುವಿನ ಜನನಕ್ಕೆ ಕನಿಷ್ಟ 3 ವರ್ಷಗಳ ಅಂತರವಿಡಲು ಕುಟುಂಬ ಕಲ್ಯಾಣ ತಾತ್ಕಾಲಿಕ ವಿಧಾನಗಳನ್ನು ಅನುಸರಿಸಲು ದಂಪತಿಗಳು ಮುಂದೆ ಬನ್ನಿ

**ನೈಜ್ಯ ದೆಸೆ ನ್ಯೂಸ್**

**ದಂಪತಿಗಳು ಸ್ವಯಂ ನಿರ್ಧಾರದ ತೆಗೆದುಕೊಂಡು ಚಿಕ್ಕ ಕುಟುಂಬ ಹೊಂದುವುದರಿಂದ, ತಾಯಿ ಮಕ್ಕಳ ಆರೋಗ್ಯ ಸುರಕ್ಷತೆ ಕೈಜೊಡಿಸಿದಂತಾಗುವುದು ಎಂದು ಚಂದ್ರಬಂಡಾ ಗ್ರಾಮದಲ್ಲಿ ಗರ್ಭಿಣಿ ಮಹಿಳೆಯ ಕುಟುಂಬದ ಸದಸ್ಯರಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ಐಇಸಿ ತಂಡದ ಮೂಲಕ ಆರೋಗ್ಯ ಶಿಕ್ಷಣ ನೀಡಲಾಯಿತು.**

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ ಸುರೇಂದ್ರಬಾಬು ರವರ ನಿರ್ದೇಶನಂತೆ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದ ಹಿನ್ನಲೆ ಚಂದ್ರಬಂಡಾ ಗ್ರಾಮಕ್ಕೆ ಬೇಟಿ ನೀಡಿದ ತಂಡವು, ಅಂಗನವಾಡಿಯಲ್ಲಿ ಲಸಿಕಾಕರಣ–ಕ್ಕೆ ಮಕ್ಕಳೊಂದಿಗೆ ಆಗಮಿಸಿದ ತಾಯಂದಿರಿಗೆ, ಮಗುವಿಗೆ 12 ಮಾರಕ ರೋಗಗಳ ವಿರುದ್ಧದ ಎಲ್ಲಾ ಲಸಿಕೆಗಳನ್ನು ವಯಸ್ಸಿಗನುಸಾರವಾಗಿ ಹಾಕಿಸುವುದನ್ನು ಮರೆಯಬಾರದು ಎಂದು ತಿಳಿಸಲಾಯಿತು. ನಂತರದಲ್ಲಿ ಗ್ರಾಮದಲ್ಲಿ ಗರ್ಭಿಣಿ ಮಹಿಳೆಯರ ಮನೆಗಳಿಗೆ ಬೇಟಿ ನೀಡಿ, ಪ್ರತಿ ತಿಂಗಳು ವೈದ್ಯರ ಬಳಿ ನಿಯಮಿತವಾಗಿ ತಪಾಸಣೆ ಮಾಡಿಸುವುದರಿಂದ ರಕ್ತದೊತ್ತಡ, ಹೆಚ್‌ಬಿ ಪ್ರಮಾಣ, ತೂಕ, ಮಗುವಿನ ಬೆಳವಣಿಗೆ, ಇತರೆ



ಯಾವುದಾದರೂ ಗಂಭೀರ ಆರೋಗ್ಯ ಸಮಸ್ಯೆಗಳು ಕಂಡು ಬಂದಲ್ಲಿ ತಕ್ಷಣ ಆರೈಕೆ, ಚಿಕಿತ್ಸೆಗೆ ಸಹಕಾರಿಯಾಗುವುದು,

ಹೆರಿಗೆಯನ್ನು ಸರಕಾರಿ ಆಸ್ಪತ್ರೆಯಲ್ಲಿ ಮಾಡಿಸಲು ತಿಳಿಸಿ, ಮೊದಲ ಮಗುವಿನ ಜನನದ ನಂತರ ಎರಡನೆಯ ಮಗುವಿನ ಜನನದ ಮಧ್ಯ ಕನಿಷ್ಟ 03 ವರ್ಷಗಳ ಅಂತರವಿಡಲು ಉಚಿತ ತಾತ್ಕಾಲಿಕ ವಿಧಾನಗಳ ಅಳವಡಿಕೆಗೆ ದಂಪತಿಗಳು ನಿರ್ಧರಿಸಿ, ಅತಿ ಸರಳವಾದ ಹಾಗೂ ಮೂರು ತಿಂಗಳಿಗೊಮ್ಮೆ ಒಂದು ಬಾರಿ ಚುಚ್ಚುಮದ್ದು ರೂಪದಲ್ಲಿ ಪಡೆಯುವ "ಅಂತರ" ಚುಚ್ಚುಮದ್ದು ಅತ್ಯಂತ ಸರಳ, ಸುಲಭವಾಗಿದ್ದು ಎಲ್ಲ ಆರೋಗ್ಯ ಕೇಂದ್ರಗಳಲ್ಲಿ ಉಚಿತವಾಗಿ ದೊರಕುತ್ತದೆ, ಅಲ್ಲದೆ ನುಂಗುವ ಮಾತ್ರೆಗಳಾದ ಮಾಲಾ–ಡಿ, ಛಾಯಾ ಮಾತ್ರೆಗಳು, ಹೆರಿಗೆ ತಕ್ಷಣವೇ ಪಿಪಿಐಯುಸಿಡಿ,

ಕಾಪರ್–ಟಿ ಅಳವಡಿಸಬಹುದಾಗಿದ್ದು, ಜೊತೆಗೆ ಪುರುಷರಿಗೆ ನಿರೋಧ್ ಉಚಿತವಾಗಿ ಲಭ್ಯವಿದ್ದು ದಂಪತಿಗಳು ಹತ್ತಿರದ ಆಸ್ಪತ್ರೆಗೆ ತೆರಳಿ ಸೌಲಭ್ಯ ಪಡೆಯಲು ವಿನಂತಿಸಲಾಯಿತು. ಜಿಲ್ಲಾ ಐಇಸಿ ತಂಡದಲ್ಲಿ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಕೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಸರೋಜಾ ಕೆ, ಪಿಹೆಚ್‌ಸಿಓ ವಿಜಯ, ಆರೋಗ್ಯ ನಿರೀಕ್ಷಣಾಧಿಕಾರಿ ವಿಜಯಕುಮಾರ್ ನಾಯಕ, ವಿಜಯಕುಮಾರ ಟಿ, ಫಾರ್ಮಸಿ ಅಧಿಕಾರಿ ನಾಸೀರ್, ಆಶಾ ಕಾರ್ಯಕರ್ತೆ ಗಂಗಮ್ಮ, ನಿರ್ಮಲಾ, ಶರಣಮ್ಮ, ಅಂಗನವಾಡಿ ಕಾರ್ಯಕರ್ತೆ ದಸ್ತಗೀರಮ್ಮ, ಸೇರಿದಂತೆ ತಾಯಂದಿರು ಉಪಸ್ಥಿತರಿದ್ದರು.